ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಕರ್ನಾಟಕ ಹಾಗೂ ಆಯ್ಕೆ ಪ್ರಾಧಿಕಾರ, ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003

ಅಧಿಸೂಚನೆ

ಸಂಖ್ಯೆ: KFD/HOFF/B9(RCT)/8/2026-PnR-KFD, ದಿನಾಂಕ: 17.11.2026

2026-27ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ (KK) ಪ್ರದೇಶದ 95 ಗಸ್ತು ಅರಣ್ಯ ಪಾಲಕ (ವೃಂದ ಮತ್ತು ನೇಮಕಾತಿ ನಿಯಮಗಳಂತೆ 'ಅರಣ್ಯ ರಕ್ಷಕ') ಗ್ರೂಪ್ 'ಸಿ' ಹುದ್ದೆಗಳಿಗೆ ನೇರ ನೇಮಕಾತಿ

ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಾವಳಿಗಳು 2021 ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: FEE 203 FEG 2015 ದಿನಾಂಕ: 06.08.2019ರ ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು, 2019ರನ್ವಯ ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ 95 ಗಸ್ತು ಅರಣ್ಯ ಪಾಲಕ *(ವೃಂದ ಮತ್ತು ನೇಮಕಾತಿ ನಿಯಮಗಳಂತೆ 'ಅರಣ್ಯ ರಕ್ಷಕ')* ಗ್ರೂಪ್ 'ಸಿ' ಹುದ್ದೆಗಳಿಗೆ *(93 ಹುದ್ದೆಗಳು + 2 ಹಿಂಬಾಕಿ ಹುದ್ದೆಗಳು=95 ಹುದ್ದೆಗಳು) [ಸರ್ಕಾರದ ಪತ್ರ ಸಂಖ್ಯೆ: ಎಫ್ಇಇ 138 ಎಫ್ಎನ್‌ಜಿ 2024 (ಇ), ದಿನಾಂಕ: 24.06.2026ರಲ್ಲಿ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 35 ವೆಚ್ಚ-5, 2025, ದಿನಾಂಕ: 17.06.2026ರನ್ವಯ ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದಲ್ಲಿ ಖಾಲಿ ಇರುವ 110 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಸರ್ಕಾರವು ಸಹಮತಿಸಿರುವುದು ಹಾಗೂ ಅರಣ್ಯ ಇಲಾಖೆಯ ಅಧಿಸೂಚನೆ ಸಂಖ್ಯೆ: KFD/HOFF/B9(RCT)/3/2022-PnR-KFD, ದಿನಾಂಕ: 17.11.2023ರ 540 ಅರಣ್ಯ ರಕ್ಷಕ ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ವಿವಿಧ ಪ್ರವರ್ಗಗಳಡಿ ಅರ್ಹ ಅಭ್ಯರ್ಥಿಗಳ ಕೊರತೆಯಿಂದ ಭರ್ತಿಯಾಗದೆ ಉಳಿದ 2 ಹಿಂಬಾಕಿ ಹುದ್ದೆಗಳು]* ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ ಅರ್ಜಿಗಳನ್ನು ಈ ಮೂಲಕ ಆಹ್ವಾನಿಸಲಾಗಿದೆ.

1. ಅರ್ಜಿ ಸಲ್ಲಿಸುವ ವಿಧಾನ:

1.1. ಈ ನೇರ ನೇಮಕಾತಿ ಅಧಿಸೂಚನೆಯನ್ನು ಕರ್ನಾಟಕ ಅರಣ್ಯ ಇಲಾಖೆಯ ಅಧಿಕೃತ ಜಾಲತಾಣ **https://aranya.gov.in/** ಮುಖ ಪುಟದಲ್ಲಿ ಇರುವ **"ನೇಮಕಾತಿ"** ಶೀರ್ಷಿಕೆಯಡಿ ಮಾಹಿತಿಗಾಗಿ ಪ್ರಕಟಿಸಲಾಗಿದೆ. ಮುಂದುವರೆದು, ಸದರಿ ಹುದ್ದೆಗಳಿಗೆ ಸಂಬಂಧಿಸಿದಂತೆ ವಸ್ತುನಿಷ್ಠ ಮಾದರಿ (Objective Type) ಅಪ್ಟಿಟ್ಯೂಡ್ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ನಡೆಸಲಾಗುವುದು. ಆದ ಕಾರಣ ಆನ್‌ಲೈನ್ ಅರ್ಜಿಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ https://cetonline.karnataka.gov.in/kea/ನಲ್ಲಿ ನೀಡಲಾಗುವ ಲಿಂಕನ್ನು ಆಯ್ಕೆ ಮಾಡಿಕೊಂಡು ಆನ್‌ಲೈನ್ (Online) (ಎಲೆಕ್ಟ್ರಾನಿಕ್ ಮಾರ್ಗ) ವ್ಯವಸ್ಥೆಯ ಮೂಲಕ ಮಾತ್ರ ಸಲ್ಲಿಸತಕ್ಕದ್ದು. **ಈ ವಿಧಾನವನ್ನು ಹೊರತುಪಡಿಸಿ ಬೇರೆ ಯಾವುದೇ ವಿಧಾನದಲ್ಲಿ ಅರ್ಜಿಯನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.**

1.2. ಅರ್ಜಿಯನ್ನು ಭರ್ತಿ ಮಾಡುವ ಮೊದಲು ಅಭ್ಯರ್ಥಿಗಳು **ಈ ಅಧಿಸೂಚನೆಯಲ್ಲಿನ ಸೂಚನೆ/ನಿರ್ದೇಶನ ಹಾಗೂ ಷರತ್ತುಗಳನ್ನು,** ಅಲ್ಲದೆ, **ಈ** ಅಧಿಸೂಚನೆಯೊಂದಿಗೆ **ಲಗತ್ತಿಸಿದ ಸರ್ಕಾರದ ಅಧಿಸೂಚನೆ ಸಂಖ್ಯೆ: FEE 203 FEG 2015 ದಿನಾಂಕ: 06.08.2019ರಲ್ಲಿ ಅಧಿಸೂಚಿತ ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಾವಳಿ 2019ನ್ನು ಕೂಲಂಕಷವಾಗಿ ಓದಿ ಸಮರ್ಪಕವಾಗಿ ಅರ್ಥೈಸಿಕೊಂಡು** ತಮಗೆ ಅನ್ವಯವಾಗುವ ವಿವರಗಳನ್ನು ಆನ್‌ಲೈನ್ (Online)

(ಎಲೆಕ್ಟ್ರಾನಿಕ್ ಮಾರ್ಗ) ಅರ್ಜಿಯ ನಿಗದಿತ ಅಂಕಣದಲ್ಲಿ ಭರ್ತಿ ಮಾಡತಕ್ಕದ್ದು. ಅಭ್ಯರ್ಥಿಗಳು ಭರ್ತಿ ಮಾಡಿದ ಆನ್‌ಲೈನ್ ಅರ್ಜಿಯ ಪ್ರತಿಯನ್ನು ಮುದ್ರಿಸಿ ಮಾಹಿತಿಗಾಗಿ ತಮ್ಮ ಬಳಿ ಇಟ್ಟುಕೊಳ್ಳತಕ್ಕದ್ದು.

*[**ವಿಶೇಷ ಸೂಚನೆ:** ಒಮ್ಮೆ ಅರ್ಜಿ ಸಲ್ಲಿಸಿದ ನಂತರ ಅರ್ಜಿಯಲ್ಲಿನ ವಿವರಗಳನ್ನು ತಿದ್ದುಪಡಿ/ಸೇರ್ಪಡೆ ಮಾಡಲು ಅವಕಾಶವಿರುವುದಿಲ್ಲ ಹಾಗೂ ಇಂತಹ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.]*

1.3. ಜನ್ಮ ದಿನಾಂಕ ದೃಢೀಕರಿಸುವ ಪ್ರಮಾಣ ಪತ್ರ, ನಿಗದಿತ ಶೈಕ್ಷಣಿಕ ವಿದ್ಯಾರ್ಹತೆಯ ಪ್ರಮಾಣ ಪತ್ರಗಳು ಹಾಗೂ ನಿಗದಿತ ಜಾತಿ/ ಪ್ರವರ್ಗ/ ಗ್ರಾಮೀಣ ಅಭ್ಯರ್ಥಿ/ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ/ ಯೋಜನೆಗಳಿಂದ ನಿರಾಶ್ರಿತಗೊಂಡ ಕುಟುಂಬದ ಅಭ್ಯರ್ಥಿ/ ಮಾಜಿ ಸೈನಿಕ ಅಭ್ಯರ್ಥಿ/ ತೃತೀಯ ಲಿಂಗ ಅಭ್ಯರ್ಥಿ/ ಅಂಗವಿಕಲ ಅಭ್ಯರ್ಥಿ/ ಸ್ಥಳೀಯ ಅರಣ್ಯ ಬುಡಕಟ್ಟು ಪರಿಶಿಷ್ಟ ಪಂಗಡ ಅಭ್ಯರ್ಥಿ ಮತ್ತು ಕ್ರೀಡಾ ಸಾಧಕ ಅಭ್ಯರ್ಥಿ ಇತ್ಯಾದಿ ದೃಢೀಕರಣ ಪ್ರಮಾಣ ಪತ್ರಗಳನ್ನು ನೇರ ನೇಮಕಾತಿ ಅಧಿಸೂಚನೆಯ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ಒಳಗೆ ಚಾಲ್ತಿಯಲ್ಲಿರುವಂತೆ ಪಡೆದಿಟ್ಟುಕೊಂಡಿರತಕ್ಕದ್ದು. **ಅಭ್ಯರ್ಥಿಯು ಆನ್‌ಲೈನ್ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಯಾವ ಪ್ರವರ್ಗ ಮತ್ತು ಮೀಸಲಾತಿಯನ್ನು ನಮೂದಿಸಿರುತ್ತಾರೆಯೋ, ಅದೇ ಪ್ರಮಾಣ ಪತ್ರ/ ದಾಖಲೆಗಳನ್ನು ಆಯ್ಕೆ ಪ್ರಕ್ರಿಯೆಯ ಎಲ್ಲಾ ಹಂತಗಳಲ್ಲಿಯೂ ಪರಿಗಣನೆಗೆ ತೆಗೆದುಕೊಳ್ಳಲಾಗುವುದು. ಇದನ್ನು ಯಾವುದೇ ಹಂತದಲ್ಲಿಯೂ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.**

1.4. ಅರ್ಜಿ/ಶುಲ್ಕ ಸ್ವೀಕೃತಿ ಕಾಲಮಿತಿ:

ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಪ್ರಾರಂಭಿಕ ದಿನಾಂಕ	23.11.2026
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	22.12.2026
ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ	23.12.2026

ಸೂಚನೆ:

- ಅಭ್ಯರ್ಥಿಗಳು ಆನ್‌ಲೈನ್ ಮುಖಾಂತರ ಅರ್ಜಿ ಭರ್ತಿ ಮಾಡುವ ಮೊದಲು ಅರ್ಹತೆಗೆ ಸಂಬಂಧಿಸಿದ ಎಲ್ಲಾ ಸೂಚನೆಗಳನ್ನು ಓದಿಕೊಳ್ಳತಕ್ಕದ್ದು ಹಾಗೂ ನೀಡಿರುವ ಸೂಚನೆಗಳನ್ವಯ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು. ತಪ್ಪು ಅಥವಾ ಸುಳ್ಳು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಸಮಯದಲ್ಲಿ ಆದರೂ ಯಾವುದೇ ಮುನ್ಸೂಚನೆಯನ್ನು ನೀಡದೇ ಅಭ್ಯರ್ಥಿತನವನ್ನು ರದ್ದುಗೊಳಿಸಲಾಗುವುದು ಹಾಗೂ ನಿಯಮಾನುಸಾರ ಅಂತಹವರ ವಿರುದ್ಧ ಸರ್ಕಾರ / ಇಲಾಖೆ/ ಪ್ರಾಧಿಕಾರವು ಕಾನೂನಿನನ್ವಯ ಸೂಕ್ತ ಕ್ರಮ ಕೈಗೊಳ್ಳುವುದು.
- ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೆ ಕಾಯದೇ ಮುಂಚಿತವಾಗಿ ನಿಗದಿತ ಅವಧಿಯಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಕೊನೆಯ ಸಮಯದಲ್ಲಿ ಅರ್ಜಿ ಸಲ್ಲಿಸಲು ಹಾಗೂ ಅರ್ಜಿ ಶುಲ್ಕವನ್ನು ಪಾವತಿಸಲು ತಾಂತ್ರಿಕ ದೋಷ / ತೊಂದರೆ ಉಂಟಾದಲ್ಲಿ ಅರಣ್ಯ ಇಲಾಖೆ / ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

1.5. ಅರ್ಜಿ ಶುಲ್ಕ:

ಆನ್‌ಲೈನ್ ಮೂಲಕ ಮಾತ್ರ ಶುಲ್ಕ ಪಾವತಿಸಬೇಕಾಗಿರುತ್ತದೆ.

ವಿವರ	ಅರ್ಜಿ ಶುಲ್ಕ	
ಸಾಮಾನ್ಯ ಅರ್ಹತೆ ಮತ್ತು ಇತರೆ ಪ್ರವರ್ಗಗಳು (ಪ್ರವರ್ಗ IIಎ / IIಬಿ/ IIIಎ ಮತ್ತು IIIಬಿ)	**ರೂ. 750/- (ರೂ. 500 ಅರ್ಜಿ ಶುಲ್ಕ + ರೂ. 250 ಪ್ರಕ್ರಿಯೆ ಶುಲ್ಕ)**	ಪಾವತಿಸಿದ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ
ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ-I/ ಮಾಜಿ ಸೈನಿಕ/ ತೃತೀಯ ಲಿಂಗ ಅಭ್ಯರ್ಥಿಗಳಿಗೆ	**500/- (ರೂ. 250 ಅರ್ಜಿ ಶುಲ್ಕ + ರೂ. 250 ಪ್ರಕ್ರಿಯೆ ಶುಲ್ಕ)**	

ವಿಶೇಷ ಚೇತನ (ಅಂಗವಿಕಲ) ಅಭ್ಯರ್ಥಿಗಳಿಗೆ	**ರೂ. 250/-** **(ರೂ. 250 ಪ್ರಕ್ರಿಯೆ ಶುಲ್ಕ)**	

ಸೂಚನೆ: ಶುಲ್ಕ ಪಾವತಿಸುವ ಮೊದಲು ಅಗತ್ಯವಿರುವ ಶೈಕ್ಷಣಿಕ ವಿದ್ಯಾರ್ಹತೆ, ಮೀಸಲಾತಿ, ವಯೋಮಿತಿ ಹಾಗೂ ಇತರೆ ಎಲ್ಲಾ ಅರ್ಹತಾ ಮಾನದಂಡ/ಷರತ್ತುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿಕೊಂಡು ಶುಲ್ಕವನ್ನು ಪಾವತಿಮಾಡತಕ್ಕದ್ದು.

ಅರ್ಜಿ ಶುಲ್ಕ ಮತ್ತು ಪ್ರಕ್ರಿಯೆ ಶುಲ್ಕವನ್ನು ಪಾವತಿಸುವ ವಿಧಾನ:

- ಅಭ್ಯರ್ಥಿಗಳು ಆನ್‌ಲೈನ್ (Online) ಮೂಲಕ ಅರ್ಜಿಯನ್ನು ಸಲ್ಲಿಸಿದ ನಂತರ ಅನ್ವಯಿಸುವ ಅರ್ಜಿ ಶುಲ್ಕ ಮತ್ತು ಪ್ರಕ್ರಿಯೆ ಶುಲ್ಕವನ್ನು ಆನ್‌ಲೈನ್ ಮೂಲಕ ಲಭ್ಯ ಮಾಡಲಾಗಿರುವ ಪಾವತಿ ಲಿಂಕ್‌ಗಳನ್ನು ಬಳಸಿ ಶುಲ್ಕವನ್ನು ಸಂದಾಯ ಮಾಡತಕ್ಕದ್ದು. ಆನ್‌ಲೈನ್ ಶುಲ್ಕದ ಪಾವತಿಯ ಬಗ್ಗೆ ಪೋರ್ಟಲ್ ನಲ್ಲಿ ಆಯ್ಕೆಗಳು ಲಭ್ಯವಿದ್ದು, ಅಭ್ಯರ್ಥಿಯು ಆನ್‌ಲೈನ್ ಮೂಲಕ ಅನ್ವಯಿಸುವ ಅರ್ಜಿ ಶುಲ್ಕ ಮತ್ತು ಪ್ರಕ್ರಿಯೆ ಶುಲ್ಕವನ್ನು **UPI/NEFT/Credit Card/ Debit Card/ Internet Banking** ಮೂಲಕ ಪಾವತಿಸಬಹುದಾಗಿದೆ. ಆನ್‌ಲೈನ್ ಮೂಲಕ ಅನ್ವಯಿಸುವ ಅರ್ಜಿ ಶುಲ್ಕ ಮತ್ತು ಪ್ರಕ್ರಿಯೆ ಶುಲ್ಕವನ್ನು ಅರ್ಜಿ ಸಲ್ಲಿಸಲು ನಿಗದಿ ಪಡಿಸಲಾಗಿರುವ ಕೊನೆಯ ದಿನಾಂಕದ ಒಳಗಾಗಿ ಪಾವತಿಸತಕ್ಕದ್ದು.
- ಅಭ್ಯರ್ಥಿಗಳು ಒಮ್ಮೆ ಪಾವತಿಸಲಾದ ಅನ್ವಯಿಸುವ ಅರ್ಜಿ ಶುಲ್ಕ ಮತ್ತು ಪ್ರಕ್ರಿಯೆ ಶುಲ್ಕವನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವುದಿಲ್ಲ ***ಅಥವಾ*** ಅದನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಇತರೆ ಯಾವುದೇ ಪರೀಕ್ಷೆ ***ಅಥವಾ*** ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. ನಿಗದಿತ ಶುಲ್ಕವನ್ನು ನಿಗದಿತ ಅವಧಿಯೊಳಗಾಗಿ ಸಂದಾಯ ಮಾಡದಿದ್ದಲ್ಲಿ, ಅಂತಹ ಅರ್ಜಿಗಳನ್ನು ಅಪೂರ್ಣ ಎಂದು ಪರಿಗಣಿಸಿ ತಿರಸ್ಕರಿಸಲಾಗುವುದು.

ವಿಶೇಷ ಸೂಚನೆ:

ಅಭ್ಯರ್ಥಿಗಳು ಆನ್‌ಲೈನ್ (Online) ಮುಖಾಂತರವೇ ಕಡ್ಡಾಯವಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಇದನ್ನು ಹೊರತುಪಡಿಸಿ, ನೇರವಾಗಿ/ ಕೊರಿಯರ್/ಸಾಧಾರಣ ಅಂಚೆ/ತ್ವರಿತ ಅಂಚೆ (Speed Post)/ಇ-ಮೇಲ್/ಮುದ್ರಾಂಕ/ಇತ್ಯಾದಿ ಯಾವುದೇ ಇತರೆ ವಿಧಾನಗಳ ಮುಖಾಂತರ ಕಳುಹಿಸಿದ ಅರ್ಜಿಗಳನ್ನು, ಪರಿಗಣಿಸಲಾಗುವುದಿಲ್ಲ. ಅಲ್ಲದೆ, ಈ ಮೇಲೆ ನಮೂದಿಸಿದಂತೆ ಅನ್ವಯಿಸುವ ಅರ್ಜಿ ಶುಲ್ಕ ಮತ್ತು ಪ್ರಕ್ರಿಯೆ ಶುಲ್ಕವನ್ನು ಪಾವತಿ ವಿಧಾನವನ್ನು ಹೊರತುಪಡಿಸಿ, ಬೇರೆ ಇತರೆ ವಿಧಾನ(ಡಿಡಿ/ ಚೆಕ್/ ಪೋಸ್ಟಲ್ ಆರ್ಡರ್/ ಇತ್ಯಾದಿ)ವನ್ನು ಪರಿಗಣಿಸಲಾಗುವುದಿಲ್ಲ. ***ಇದಕ್ಕೆ ಅಭ್ಯರ್ಥಿಗಳೇ ನೇರ ಜವಾಬ್ದಾರರು/ಹೊಣೆಗಾರರಾಗಿರುತ್ತಾರೆ.***

2. ಗಸ್ತು ಅರಣ್ಯ ಪಾಲಕ *(ವೃಂದ ಮತ್ತು ನೇಮಕಾತಿ ನಿಯಮಗಳಂತೆ 'ಅರಣ್ಯ ರಕ್ಷಕ')* ವೃಂದದ ಹುದ್ದೆಗಳ ವಿವರ:

2.1.ವೇತನ ಶ್ರೇಣಿ: ರೂ. 37500-900-39300-1000-43300-1125-47800-1250-52800-1375-58300-1500-64300-1650-74200-1900-76100- ಅನ್ವಯ.

2.2.ಖಾಲಿ ಹುದ್ದೆಗಳ ವೃತ್ತವಾರು/ವಿಭಾಗವಾರು ವಿವರ:

ಕ್ರ. ಸಂ.	ವೃತ್ತ	ವಿಭಾಗ	ಹುದ್ದೆಗಳ ಸಂಖ್ಯೆ
1	ಬಳ್ಳಾರಿ	ಬಳ್ಳಾರಿ ಪ್ರಾದೇಶಿಕ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)]	6
		ಬಳ್ಳಾರಿ ಸಾಮಾಜಿಕ ಅರಣ್ಯ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)]	4
		ಬಳ್ಳಾರಿ ಅರಣ್ಯ ಸಂಚಾರಿದಳ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)]	3
		ಬಳ್ಳಾರಿ ಸಂಶೋಧನೆ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)]	4

ಕ್ರ. ಸಂ.	ವೃತ್ತ	ವಿಭಾಗ	ಹುದ್ದೆಗಳ ಸಂಖ್ಯೆ
		ಕೊಪ್ಪಳ ಸಾಮಾಜಿಕ ಅರಣ್ಯ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)]	5
		ಕೊಪ್ಪಳ ಪ್ರಾದೇಶಿಕ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)]	4
		ವಿಜಯನಗರ ಪ್ರಾದೇಶಿಕ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)]	5
		ಬಳ್ಳಾರಿ ವೃತ್ತ ಒಟ್ಟು	**31**
2	ಕಲಬುರ್ಗಿ	ಬೀದರ್ ಪ್ರಾದೇಶಿಕ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)]	8
		ಬೀದರ್ ಸಾಮಾಜಿಕ ಅರಣ್ಯ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)]	5
		ಕಲಬುರ್ಗಿ ಪ್ರಾದೇಶಿಕ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)]	15
		ಕಲಬುರ್ಗಿ ಸಾಮಾಜಿಕ ಅರಣ್ಯ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)]	5
		ಕಲಬುರ್ಗಿ ಅರಣ್ಯ ಸಂಚಾರಿದಳ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)]	2
		ರಾಯಚೂರು ಪ್ರಾದೇಶಿಕ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)]	5
		ರಾಯಚೂರು ಸಾಮಾಜಿಕ ಅರಣ್ಯ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)]	7
		ಯಾದಗಿರಿ ಪ್ರಾದೇಶಿಕ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)]	13
		ಯಾದಗಿರಿ ಸಾಮಾಜಿಕ ಅರಣ್ಯ ವಿಭಾಗ [ಕಲ್ಯಾಣ ಕರ್ನಾಟಕ ಉಳಿಕೆ ಮೂಲ ವೃಂದ (Residual Parent Cadre)]	2
		ಕಲಬುರ್ಗಿ ವೃತ್ತ ಒಟ್ಟು	**62**
		ವೃತ್ತವಾರು ಒಟ್ಟು	**93**

2.3. ಕರ್ನಾಟಕ ಅರಣ್ಯ ಇಲಾಖೆಯ ಹಿಂದಿನ ನೇರ ನೇಮಕಾತಿ ಅಧಿಸೂಚನೆ ಸಂಖ್ಯೆ: KFD/HOFF/B9(RCT)/3/2022-PnR-KFD, ದಿನಾಂಕ: 17.11.2023ರ 540 ಅರಣ್ಯ ರಕ್ಷಕ ಹುದ್ದೆಗಳಿಗೆ ನೇರ ನೇಮಕಾತಿಗೆ ಸಂಬಂಧಿಸಿದಂತೆ ವಿವಿಧ ಪ್ರವರ್ಗದಡಿ ಅರ್ಹ ಅಭ್ಯರ್ಥಿಗಳ ಕೊರತೆಯಿಂದ ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದಡಿ ಭರ್ತಿಯಾಗದೆ ಉಳಿದ **2 ಹಿಂಬಾಕಿ (Backlog) ಹುದ್ದೆಗಳ ವಿಭಾಗವಾರು ವಿವರ:**

ಕ್ರ. ಸಂ.	ವೃತ್ತ	ವಿಭಾಗ	ಹಿಂಬಾಕಿ (Backlog) ಹುದ್ದೆಗಳು ಪ್ರವರ್ಗ	ಸಂಖ್ಯೆ
5	ಕಲಬುರಗಿ	ಬೀದರ್ ಪ್ರಾದೇಶಿಕ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ-KK-LC)	ಸಾಮಾನ್ಯ ಅರ್ಹತೆ – ಅಂಗವಿಕಲ ಅಭ್ಯರ್ಥಿ [GM-PH (LC/AAV/MI)]	1
		ಕಲಬುರಗಿ ಪ್ರಾದೇಶಿಕ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ-KK-LC)		1
		ಕಲಬುರಗಿ ವೃತ್ತ ಒಟ್ಟು		**2**

2.4. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2026, ದಿನಾಂಕ: 13.05.2026 (Vertical Reservation) ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 05 ಸೆಹಿಮ 2026, ದಿನಾಂಕ: 13.10.2026 (Horizantal Reservation) ರನ್ವಯ ಹುದ್ದೆಗಳ ಪ್ರವರ್ಗವಾರು ಮೀಸಲಾತಿ ವರ್ಗೀಕರಣ:

ಗಸ್ತು ಅರಣ್ಯ ಪಾಲಕ (ವೃಂದ ಮತ್ತು ನೇಮಕಾತಿ ನಿಯಮಗಳಂತೆ 'ಅರಣ್ಯ ರಕ್ಷಕ') ಖಾಲಿ ಹುದ್ದೆಗಳಿಗೆ ಅಧಿಸೂಚಿಸಿರುವ ವೃತ್ತಗಳ ವಿಭಾಗಕ್ಕೆ ಸಂಬಂಧಿಸಿದಂತೆ ಪ್ರವರ್ಗವಾರು ನೇರ ಮತ್ತು ಸಮತಳ ಮೀಸಲಾತಿ ವರ್ಗೀಕರಣ ಈ ಕೆಳಕಂಡಂತಿದೆ.

2.4.1. ಬಳ್ಳಾರಿ ವೃತ್ತ

2.4.1.1. ಬಳ್ಳಾರಿ ಪ್ರಾದೇಶಿಕ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)] – 6 ಹುದ್ದೆಗಳು:

ಪ್ರವರ್ಗ (ನೇರ ಮೀಸಲಾತಿ)	ಸಮತಳ ಮೀಸಲಾತಿ								ಒಟ್ಟು
	ಇತರೆ	ಮಾಜಿ ಸೈನಿಕ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ	ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಕ್ರೀಡಾ ಸಾಧಕ ಅಭ್ಯರ್ಥಿ		
ಸಾಮಾನ್ಯ ಅರ್ಹತೆ	1	-	1	-	-	1	-	-	3
ಪರಿಶಿಷ್ಟ ಜಾತಿ	1	-	-	-	-	-	-	-	1
ಪರಿಶಿಷ್ಟ ಪಂಗಡ	-	-	-	-	-	-	-	-	0
ಪ್ರವರ್ಗ – I	-	-	-	-	-	-	-	-	0
ಪ್ರವರ್ಗ – IIಎ	1	-	-	-	-	-	-	-	1
ಪ್ರವರ್ಗ – IIಬಿ	1	-	-	-	-	-	-	-	1
ಪ್ರವರ್ಗ – IIIಎ	-	-	-	-	-	-	-	-	0
ಪ್ರವರ್ಗ – IIIಬಿ	-	-	-	-	-	-	-	-	0
ಒಟ್ಟು	4	0	1	0	0	1	0	0	6

ಷರಾ: *ಸರ್ಕಾರದ ಅಧಿಸೂಚನೆ ಸಂಖ್ಯೆ: ಡಬ್ಲುಸಿಡಿ 111 ಪಿಹೆಚ್‌ಪಿ 2022 ದಿನಾಂಕ 19.08.2023ರನ್ವಯ ಗಸ್ತು ಅರಣ್ಯ ಪಾಲಕ ವೃಂದದಲ್ಲಿ LC – Leprosy Cured, AAV – Acid Attack Victims and MI – Mental Illness ಅಂಗವಿಕಲ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ ನೀಡಲಾಗಿರುತ್ತದೆ.*

2.4.1.2. ಬಳ್ಳಾರಿ ಸಾಮಾಜಿಕ ಅರಣ್ಯ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)] – 4 ಹುದ್ದೆಗಳು:

ಪ್ರವರ್ಗ (ನೇರ ಮೀಸಲಾತಿ)	ಸಮತಳ ಮೀಸಲಾತಿ								ಒಟ್ಟು
	ಇತರೆ	ಮಾಜಿ ಸೈನಿಕ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ	ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಕ್ರೀಡಾ ಸಾಧಕ ಅಭ್ಯರ್ಥಿ		
ಸಾಮಾನ್ಯ ಅರ್ಹತೆ	2	-	-	-	-	-	-	-	2
ಪರಿಶಿಷ್ಟ ಜಾತಿ	1	-	-	-	-	-	-	-	1
ಪರಿಶಿಷ್ಟ ಪಂಗಡ	1	-	-	-	-	-	-	-	1
ಪ್ರವರ್ಗ – I	-	-	-	-	-	-	-	-	0
ಪ್ರವರ್ಗ – IIಎ	-	-	-	-	-	-	-	-	0
ಪ್ರವರ್ಗ – IIಬಿ	-	-	-	-	-	-	-	-	0
ಪ್ರವರ್ಗ – IIIಎ	-	-	-	-	-	-	-	-	0
ಪ್ರವರ್ಗ – IIIಬಿ	-	-	-	-	-	-	-	-	0
ಒಟ್ಟು	4	0	0	0	0	0	0	0	4

2.4.1.3. ಬಳ್ಳಾರಿ ಅರಣ್ಯ ಸಂಚಾರಿದಳ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (KK-LC - Kalyana Karnataka Local Cadre)] – 3 ಹುದ್ದೆಗಳು:

ಪ್ರವರ್ಗ (ನೇರ ಮೀಸಲಾತಿ)	ಸಮತಳ ಮೀಸಲಾತಿ								ಒಟ್ಟು
	ಇತರೆ	ಮಾಜಿ ಸೈನಿಕ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತರಾದ ಅಭ್ಯರ್ಥಿ	ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಕ್ರೀಡಾ ಸಾಧಕ ಅಭ್ಯರ್ಥಿ		
ಸಾಮಾನ್ಯ ಅರ್ಹತೆ	1	-	-	-	-	-	-	-	1
ಪರಿಶಿಷ್ಟ ಜಾತಿ	1	-	-	-	-	-	-	-	1
ಪರಿಶಿಷ್ಟ ಪಂಗಡ	1	-	-	-	-	-	-	-	1
ಪ್ರವರ್ಗ – I	-	-	-	-	-	-	-	-	0
ಪ್ರವರ್ಗ – IIಎ	-	-	-	-	-	-	-	-	0
ಪ್ರವರ್ಗ – IIಬಿ	-	-	-	-	-	-	-	-	0
ಪ್ರವರ್ಗ – IIIಎ	-	-	-	-	-	-	-	-	0
ಪ್ರವರ್ಗ – IIIಬಿ	-	-	-	-	-	-	-	-	0
ಒಟ್ಟು	3	0	0	0	0	0	0	0	3

ಪರಾ: *ಸರ್ಕಾರದ ಅಧಿಸೂಚನೆ ಸಂಖ್ಯೆ: ಡಬ್ಲುಸಿಡಿ 111 ಪಿಹೆಚ್‌ಪಿ 2022 ದಿನಾಂಕ 19.08.2023ರನ್ವಯ ಗಸ್ತು ಅರಣ್ಯ ಪಾಲಕ ವೃಂದದಲ್ಲಿ LC – Leprosy Cured, AAV – Acid Attack Victims and MI – Mental Illness ಅಂಗವಿಕಲ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ ನೀಡಲಾಗಿರುತ್ತದೆ.*

2.4.1.4. ಬಳ್ಳಾರಿ ಸಂಶೋಧನಾ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)] – 4 ಹುದ್ದೆಗಳು:

ಪ್ರವರ್ಗ (ನೇರ ಮೀಸಲಾತಿ)	ಸಮತಳ ಮೀಸಲಾತಿ								ಒಟ್ಟು
	ಇತರೆ	ಮಾಜಿ ಸೈನಿಕ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತರಾದ ಅಭ್ಯರ್ಥಿ	ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಕ್ರೀಡಾ ಸಾಧಕ ಅಭ್ಯರ್ಥಿ		
ಸಾಮಾನ್ಯ ಅರ್ಹತೆ	2	-	-	-	-	-	-	-	2
ಪರಿಶಿಷ್ಟ ಜಾತಿ	1	-	-	-	-	-	-	-	1
ಪರಿಶಿಷ್ಟ ಪಂಗಡ	1	-	-	-	-	-	-	-	1
ಪ್ರವರ್ಗ – I	-	-	-	-	-	-	-	-	0
ಪ್ರವರ್ಗ – IIಎ	-	-	-	-	-	-	-	-	0
ಪ್ರವರ್ಗ – IIಬಿ	-	-	-	-	-	-	-	-	0
ಪ್ರವರ್ಗ – IIIಎ	-	-	-	-	-	-	-	-	0
ಪ್ರವರ್ಗ – IIIಬಿ	-	-	-	-	-	-	-	-	0
ಒಟ್ಟು	4	0	0	0	0	0	0	0	4

2.4.1.5. ಕೊಪ್ಪಳ ಸಾಮಾಜಿಕ ಅರಣ್ಯ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)] – 5 ಹುದ್ದೆ:

ಪ್ರವರ್ಗ (ನೇರ ಮೀಸಲಾತಿ)	ಸಮತಳ ಮೀಸಲಾತಿ								ಒಟ್ಟು
	ಇತರೆ	ಮಾಜಿ ಸೈನಿಕ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತರಾದ ಅಭ್ಯರ್ಥಿ	ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಕ್ಷೇತ್ರೀಯ ಲಿಂಗ ಅಭ್ಯರ್ಥಿ	ಕ್ರೀಡಾ ಸಾಧಕ ಅಭ್ಯರ್ಥಿ	
ಸಾಮಾನ್ಯ ಅರ್ಹತೆ	2	-	-	-	-	-	-	-	2
ಪರಿಶಿಷ್ಟ ಜಾತಿ	1	-	-	-	-	-	-	-	1
ಪರಿಶಿಷ್ಟ ಪಂಗಡ	1	-	-	-	-	-	-	-	1
ಪ್ರವರ್ಗ – I	1	-	-	-	-	-	-	-	1
ಪ್ರವರ್ಗ – IIಎ	-	-	-	-	-	-	-	-	0
ಪ್ರವರ್ಗ – IIಬಿ	-	-	-	-	-	-	-	-	0
ಪ್ರವರ್ಗ – IIIಎ	-	-	-	-	-	-	-	-	0
ಪ್ರವರ್ಗ – IIIಬಿ	-	-	-	-	-	-	-	-	0
ಒಟ್ಟು	5	0	0	0	0	0	0	0	5

2.4.1.6. ಕೊಪ್ಪಳ ಪ್ರಾದೇಶಿಕ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka - Local Cadre)] – 4 ಹುದ್ದೆ:

ಪ್ರವರ್ಗ (ನೇರ ಮೀಸಲಾತಿ)	ಸಮತಳ ಮೀಸಲಾತಿ								ಒಟ್ಟು
	ಇತರೆ	ಮಾಜಿ ಸೈನಿಕ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತರಾದ ಅಭ್ಯರ್ಥಿ	ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಕ್ಷೇತ್ರೀಯ ಲಿಂಗ ಅಭ್ಯರ್ಥಿ	ಕ್ರೀಡಾ ಸಾಧಕ ಅಭ್ಯರ್ಥಿ	
ಸಾಮಾನ್ಯ ಅರ್ಹತೆ	2	-	-	-	-	-	-	-	2
ಪರಿಶಿಷ್ಟ ಜಾತಿ	1	-	-	-	-	-	-	-	1
ಪರಿಶಿಷ್ಟ ಪಂಗಡ	1	-	-	-	-	-	-	-	1
ಪ್ರವರ್ಗ – I	-	-	-	-	-	-	-	-	0
ಪ್ರವರ್ಗ – IIಎ	-	-	-	-	-	-	-	-	0
ಪ್ರವರ್ಗ – IIಬಿ	-	-	-	-	-	-	-	-	0
ಪ್ರವರ್ಗ – IIIಎ	-	-	-	-	-	-	-	-	0
ಪ್ರವರ್ಗ – IIIಬಿ	-	-	-	-	-	-	-	-	0
ಒಟ್ಟು	4	0	0	0	0	0	0	0	4

2.4.1.7. ವಿಜಯನಗರ ಪ್ರಾದೇಶಿಕ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka - Local Cadre)] – 5 ಹುದ್ದೆಗಳು:

ಪ್ರವರ್ಗ (ನೇರ ಮೀಸಲಾತಿ)	ಸಮತಳ ಮೀಸಲಾತಿ								ಒಟ್ಟು
	ಇತರೆ	ಮಾಜಿ ಸೈನಿಕ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತರಾದ ಅಭ್ಯರ್ಥಿ	ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಕ್ರೀಯ ಲಿಂಗ ತೃತೀಯ ಅಭ್ಯರ್ಥಿ	ಕ್ರೀಡಾ ಸಾಧಕ ಅಭ್ಯರ್ಥಿ	
ಸಾಮಾನ್ಯ ಅರ್ಹತೆ	1	-	1	-	-	1	-	-	3
ಪರಿಶಿಷ್ಟ ಜಾತಿ	1	-	-	-	-	-	-	-	1
ಪರಿಶಿಷ್ಟ ಪಂಗಡ	-	-	-	-	-	-	-	-	0
ಪ್ರವರ್ಗ – I	-	-	-	-	-	-	-	-	0
ಪ್ರವರ್ಗ – IIಎ	-	-	-	-	-	-	-	-	0
ಪ್ರವರ್ಗ – IIಬಿ	1	-	-	-	-	-	-	-	1
ಪ್ರವರ್ಗ – IIIಎ	-	-	-	-	-	-	-	-	0
ಪ್ರವರ್ಗ – IIIಬಿ	-	-	-	-	-	-	-	-	0
ಒಟ್ಟು	3	0	1	0	0	1	0	0	5

ಷರಾ: *ಸರ್ಕಾರದ ಅಧಿಸೂಚನೆ ಸಂಖ್ಯೆ: ಡಬ್ಲುಸಿಡಿ 111 ಪಿಹೆಚ್‌ಪಿ 2022 ದಿನಾಂಕ 19.08.2023ರನ್ವಯ ಗಸ್ತು ಅರಣ್ಯ ಪಾಲಕ ವೃಂದದಲ್ಲಿ LC – Leprosy Cured, AAV – Acid Attack Victims and MI – Mental Illness ಅಂಗವಿಕಲ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ ನೀಡಲಾಗಿರುತ್ತದೆ.*

2.4.2. ಕಲಬುರ್ಗಿ ವೃತ್ತ

2.4.2.1. ಬೀದರ್ ಪ್ರಾದೇಶಿಕ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)] – 8 ಹುದ್ದೆಗಳು:

ಪ್ರವರ್ಗ (ನೇರ ಮೀಸಲಾತಿ)	ಸಮತಳ ಮೀಸಲಾತಿ								ಒಟ್ಟು
	ಇತರೆ	ಮಾಜಿ ಸೈನಿಕ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತರಾದ ಅಭ್ಯರ್ಥಿ	ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಕ್ರೀಯ ಲಿಂಗ ತೃತೀಯ ಅಭ್ಯರ್ಥಿ	ಕ್ರೀಡಾ ಸಾಧಕ ಅಭ್ಯರ್ಥಿ	
ಸಾಮಾನ್ಯ ಅರ್ಹತೆ	3	-	-	-	-	1	-	-	4
ಪರಿಶಿಷ್ಟ ಜಾತಿ	1	-	-	-	-	1	-	-	2
ಪರಿಶಿಷ್ಟ ಪಂಗಡ	-	-	-	-	-	-	-	-	0
ಪ್ರವರ್ಗ – I	-	-	-	-	-	-	-	-	0
ಪ್ರವರ್ಗ – IIಎ	1	-	-	-	-	-	-	-	1
ಪ್ರವರ್ಗ – IIಬಿ	1	-	-	-	-	-	-	-	1
ಪ್ರವರ್ಗ – IIIಎ	-	-	-	-	-	-	-	-	0
ಪ್ರವರ್ಗ – IIIಬಿ	-	-	-	-	-	-	-	-	0
ಒಟ್ಟು	6	0	0	0	0	2	0	0	8

2.4.2.2. ಬೀದರ್ ಸಾಮಾಜಿಕ ಅರಣ್ಯ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (KK-LC - Kalyana Karnataka Local Cadre)]– 5 ಹುದ್ದೆಗಳು:

ಪ್ರವರ್ಗ (ನೇರ ಮೀಸಲಾತಿ)	ಸಮತಳ ಮೀಸಲಾತಿ								ಒಟ್ಟು
	ಇತರೆ	ಮಾಜಿ ಸೈನಿಕ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ	ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಕ್ರೀಯ ಲಿಂಗ ಅಭ್ಯರ್ಥಿ	ಕ್ರೀಡಾ ಸಾಧಕ ಅಭ್ಯರ್ಥಿ	
ಸಾಮಾನ್ಯ ಅರ್ಹತೆ	2	-	-	-	-	-	-	-	2
ಪರಿಶಿಷ್ಟ ಜಾತಿ	1	-	-	-	-	-	-	-	1
ಪರಿಶಿಷ್ಟ ಪಂಗಡ	1	-	-	-	-	-	-	-	1
ಪ್ರವರ್ಗ – I	1	-	-	-	-	-	-	-	1
ಪ್ರವರ್ಗ – IIಎ	-	-	-	-	-	-	-	-	0
ಪ್ರವರ್ಗ – IIಬಿ	-	-	-	-	-	-	-	-	0
ಪ್ರವರ್ಗ – IIIಎ	-	-	-	-	-	-	-	-	0
ಪ್ರವರ್ಗ – IIIಬಿ	-	-	-	-	-	-	-	-	0
ಒಟ್ಟು	**5**	**0**	**0**	**0**	**0**	**0**	**0**	**0**	**5**

2.4.2.3. ಕಲಬುರ್ಗಿ ಪ್ರಾದೇಶಿಕ ವಿಭಾಗ [ಕಲ್ಯಾಣ ಕರ್ನಾಟಕ ಪ್ರಾದೇಶಿಕ ಸ್ಥಳೀಯ ವೃಂದ (KKRLC - Kalyana Karnataka Regional Local Cadre)] – 15 ಹುದ್ದೆಗಳು:

ಪ್ರವರ್ಗ (ನೇರ ಮೀಸಲಾತಿ)	ಸಮತಳ ಮೀಸಲಾತಿ								ಒಟ್ಟು
	ಇತರೆ	ಮಾಜಿ ಸೈನಿಕ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ	ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಕ್ರೀಯ ಲಿಂಗ ಅಭ್ಯರ್ಥಿ	ಕ್ರೀಡಾ ಸಾಧಕ ಅಭ್ಯರ್ಥಿ	
ಸಾಮಾನ್ಯ ಅರ್ಹತೆ	4	1	-	-	-	2	-	-	7
ಪರಿಶಿಷ್ಟ ಜಾತಿ	-	-	1	-	-	1	-	-	2
ಪರಿಶಿಷ್ಟ ಪಂಗಡ	-	-	-	-	-	-	-	-	0
ಪ್ರವರ್ಗ – I	-	-	-	-	-	-	-	-	0
ಪ್ರವರ್ಗ – IIಎ	1	-	1	-	-	1	-	-	3
ಪ್ರವರ್ಗ – IIಬಿ	1	-	-	-	-	-	-	-	1
ಪ್ರವರ್ಗ – IIIಎ	1	-	-	-	-	-	-	-	1
ಪ್ರವರ್ಗ – IIIಬಿ	1	-	-	-	-	-	-	-	1
ಒಟ್ಟು	**8**	**1**	**2**	**0**	**0**	**4**	**0**	**0**	**15**

ಷರಾ: *ಸರ್ಕಾರದ ಅಧಿಸೂಚನೆ ಸಂಖ್ಯೆ: ಡಬ್ಲುಸಿಡಿ 111 ಪಿಹೆಚ್‌ಪಿ 2022 ದಿನಾಂಕ 19.08.2023ರನ್ವಯ ಗಸ್ತು ಅರಣ್ಯ ಪಾಲಕ ವೃಂದದಲ್ಲಿ LC – Leprosy Cured, AAV – Acid Attack Victims and MI – Mental Illness ಅಂಗವಿಕಲ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ ನೀಡಲಾಗಿರುತ್ತದೆ.*

2.4.2.4. ಕಲಬುರ್ಗಿ ಸಾಮಾಜಿಕ ಅರಣ್ಯ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)] – 5 ಹುದ್ದೆಗಳು:

ಪ್ರವರ್ಗ (ನೇರ ಮೀಸಲಾತಿ)	ಸಮತಳ ಮೀಸಲಾತಿ								ಒಟ್ಟು
	ಇತರೆ	ಮಾಜಿ ಸೈನಿಕ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತರಾದ ಅಭ್ಯರ್ಥಿ	ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಕ್ರೀಡಾ ಸಾಧಕ ಅಭ್ಯರ್ಥಿ		
ಸಾಮಾನ್ಯ ಅರ್ಹತೆ	2	-	-	-	-	-	-	-	2
ಪರಿಶಿಷ್ಟ ಜಾತಿ	1	-	-	-	-	-	-	-	1
ಪರಿಶಿಷ್ಟ ಪಂಗಡ	1	-	-	-	-	-	-	-	1
ಪ್ರವರ್ಗ – I	1	-	-	-	-	-	-	-	1
ಪ್ರವರ್ಗ – IIಎ	-	-	-	-	-	-	-	-	0
ಪ್ರವರ್ಗ – IIಬಿ	-	-	-	-	-	-	-	-	0
ಪ್ರವರ್ಗ – IIIಎ	-	-	-	-	-	-	-	-	0
ಪ್ರವರ್ಗ – IIIಬಿ	-	-	-	-	-	-	-	-	0
ಒಟ್ಟು	5	0	0	0	0	0	0	0	5

2.4.2.5. ಕಲಬುರ್ಗಿ ಅರಣ್ಯ ಸಂಚಾರಿದಳ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)] – 2 ಹುದ್ದೆಗಳು:

ಪ್ರವರ್ಗ (ನೇರ ಮೀಸಲಾತಿ)	ಸಮತಳ ಮೀಸಲಾತಿ								ಒಟ್ಟು
	ಇತರೆ	ಮಾಜಿ ಸೈನಿಕ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತರಾದ ಅಭ್ಯರ್ಥಿ	ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಕ್ರೀಡಾ ಸಾಧಕ ಅಭ್ಯರ್ಥಿ		
ಸಾಮಾನ್ಯ ಅರ್ಹತೆ	1	-	-	-	-	-	-	-	1
ಪರಿಶಿಷ್ಟ ಜಾತಿ	1	-	-	-	-	-	-	-	1
ಪರಿಶಿಷ್ಟ ಪಂಗಡ	-	-	-	-	-	-	-	-	0
ಪ್ರವರ್ಗ – I	-	-	-	-	-	-	-	-	0
ಪ್ರವರ್ಗ – IIಎ	-	-	-	-	-	-	-	-	0
ಪ್ರವರ್ಗ – IIಬಿ	-	-	-	-	-	-	-	-	0
ಪ್ರವರ್ಗ – IIIಎ	-	-	-	-	-	-	-	-	0
ಪ್ರವರ್ಗ – IIIಬಿ	-	-	-	-	-	-	-	-	0
ಒಟ್ಟು	2	0	0	0	0	0	0	0	2

2.4.2.6. ರಾಯಚೂರು ಪ್ರಾದೇಶಿಕ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)] – 5 ಹುದ್ದೆಗಳು:

ಪ್ರವರ್ಗ (ನೇರ ಮೀಸಲಾತಿ)	ಸಮತಳ ಮೀಸಲಾತಿ								ಒಟ್ಟು
	ಇತರೆ	ಮಾಜಿ ಸೈನಿಕ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತರಾದ ಅಭ್ಯರ್ಥಿ	ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಕ್ರೀಡಾ ಸಾಧಕ ಅಭ್ಯರ್ಥಿ		
ಸಾಮಾನ್ಯ ಅರ್ಹತೆ	2	-	-	-	-	-	-	-	2

ಪ್ರವರ್ಗ (ನೇರ ಮೀಸಲಾತಿ)	ಸಮತಳ ಮೀಸಲಾತಿ								ಒಟ್ಟು
	ಇತರೆ	ಮಾಜಿ ಸೈನಿಕ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತರಾದ ಅಭ್ಯರ್ಥಿ	ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ತೃತೀಯ ಲಿಂಗ ಅಭ್ಯರ್ಥಿ	ಕ್ರೀಡಾ ಸಾಧಕ ಅಭ್ಯರ್ಥಿ	
ಪರಿಶಿಷ್ಟ ಜಾತಿ	1	-	-	-	-	-	-	-	1
ಪರಿಶಿಷ್ಟ ಪಂಗಡ	1	-	-	-	-	-	-	-	1
ಪ್ರವರ್ಗ – I	1	-	-	-	-	-	-	-	1
ಪ್ರವರ್ಗ – IIಎ	-	-	-	-	-	-	-	-	0
ಪ್ರವರ್ಗ – IIಬಿ	-	-	-	-	-	-	-	-	0
ಪ್ರವರ್ಗ – IIIಎ	-	-	-	-	-	-	-	-	0
ಪ್ರವರ್ಗ – IIIಬಿ	-	-	-	-	-	-	-	-	0
ಒಟ್ಟು	5	0	0	0	0	0	0	0	5

2.4.2.7. ರಾಯಚೂರು ಸಾಮಾಜಿಕ ಅರಣ್ಯ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)] – 7 ಹುದ್ದೆಗಳು:

ಪ್ರವರ್ಗ (ನೇರ ಮೀಸಲಾತಿ)	ಸಮತಳ ಮೀಸಲಾತಿ								ಒಟ್ಟು
	ಇತರೆ	ಮಾಜಿ ಸೈನಿಕ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತರಾದ ಅಭ್ಯರ್ಥಿ	ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ತೃತೀಯ ಲಿಂಗ ಅಭ್ಯರ್ಥಿ	ಕ್ರೀಡಾ ಸಾಧಕ ಅಭ್ಯರ್ಥಿ	
ಸಾಮಾನ್ಯ ಅರ್ಹತೆ	2	-	-	-	-	1	-	-	3
ಪರಿಶಿಷ್ಟ ಜಾತಿ	1	-	-	-	-	-	-	-	1
ಪರಿಶಿಷ್ಟ ಪಂಗಡ	1	-	-	-	-	-	-	-	1
ಪ್ರವರ್ಗ – I	1	-	-	-	-	-	-	-	1
ಪ್ರವರ್ಗ – IIಎ	1	-	-	-	-	-	-	-	1
ಪ್ರವರ್ಗ – IIಬಿ	-	-	-	-	-	-	-	-	0
ಪ್ರವರ್ಗ – IIIಎ	-	-	-	-	-	-	-	-	0
ಪ್ರವರ್ಗ – IIIಬಿ	-	-	-	-	-	-	-	-	0
ಒಟ್ಟು	6	0	0	0	0	1	0	0	7

2.4.2.8. ಯಾದಗಿರಿ ಪ್ರಾದೇಶಿಕ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (KK-LC - Kalyana Karnataka Local Cadre)] – 13 ಹುದ್ದೆ:

ಪ್ರವರ್ಗ (ನೇರ ಮೀಸಲಾತಿ)	ಸಮತಳ ಮೀಸಲಾತಿ								ಒಟ್ಟು
	ಇತರೆ	ಮಾಜಿ ಸೈನಿಕ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತರಾದ ಅಭ್ಯರ್ಥಿ	ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ತೃತೀಯ ಲಿಂಗ ಅಭ್ಯರ್ಥಿ	ಕ್ರೀಡಾ ಸಾಧಕ ಅಭ್ಯರ್ಥಿ	
ಸಾಮಾನ್ಯ ಅರ್ಹತೆ	3	-	1	-	-	2	-	-	6
ಪರಿಶಿಷ್ಟ ಜಾತಿ	1	-	-	-	-	1	-	-	2
ಪರಿಶಿಷ್ಟ ಪಂಗಡ	1	-	-	-	-	-	-	-	1
ಪ್ರವರ್ಗ – I	1	-	-	-	-	-	-	-	1

ಪ್ರವರ್ಗ (ನೇರ ಮೀಸಲಾತಿ)	ಸಮತಳ ಮೀಸಲಾತಿ								ಒಟ್ಟು
	ಇತರೆ	ಮಾಜಿ ಸೈನಿಕ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತರೊಂದ ಅಭ್ಯರ್ಥಿ	ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ತೃತೀಯ ಲಿಂಗ ಅಭ್ಯರ್ಥಿ	ಕ್ರೀಡಾ ಸಾಧಕ ಅಭ್ಯರ್ಥಿ	
ಪ್ರವರ್ಗ – IIಎ	2	-	-	-	-	-	-	-	2
ಪ್ರವರ್ಗ – IIಬಿ	1	-	-	-	-	-	-	-	1
ಪ್ರವರ್ಗ – IIIಎ	-	-	-	-	-	-	-	-	0
ಪ್ರವರ್ಗ – IIIಬಿ	-	-	-	-	-	-	-	-	0
ಒಟ್ಟು	9	0	1	0	0	3	0	0	13

2.4.2.9. ಯಾದಗಿರಿ ಸಾಮಾಜಿಕ ಅರಣ್ಯ ವಿಭಾಗ [ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ (Kalyana Karnataka Local Cadre)] – 2 ಹುದ್ದೆ:

ಪ್ರವರ್ಗ (ನೇರ ಮೀಸಲಾತಿ)	ಸಮತಳ ಮೀಸಲಾತಿ								ಒಟ್ಟು
	ಇತರೆ	ಮಾಜಿ ಸೈನಿಕ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತರೊಂದ ಅಭ್ಯರ್ಥಿ	ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ತೃತೀಯ ಲಿಂಗ ಅಭ್ಯರ್ಥಿ	ಕ್ರೀಡಾ ಸಾಧಕ ಅಭ್ಯರ್ಥಿ	
ಸಾಮಾನ್ಯ ಅರ್ಹತೆ	1	-	-	-	-	-	-	-	1
ಪರಿಶಿಷ್ಟ ಜಾತಿ	1	-	-	-	-	-	-	-	1
ಪರಿಶಿಷ್ಟ ಪಂಗಡ	-	-	-	-	-	-	-	-	0
ಪ್ರವರ್ಗ – I	-	-	-	-	-	-	-	-	0
ಪ್ರವರ್ಗ – IIಎ	-	-	-	-	-	-	-	-	0
ಪ್ರವರ್ಗ – IIಬಿ	-	-	-	-	-	-	-	-	0
ಪ್ರವರ್ಗ – IIIಎ	-	-	-	-	-	-	-	-	0
ಪ್ರವರ್ಗ – IIIಬಿ	-	-	-	-	-	-	-	-	0
ಒಟ್ಟು	2	0	0	0	0	0	0	0	2

ವಿಶೇಷ ಸೂಚನೆ:

*ಈ ಮೇಲ್ಕಂಡ ವೃತ್ತವಾರು / ವಿಭಾಗವಾರು ಖಾಲಿ ಹುದ್ದೆಗಳು ಮತ್ತು ವರ್ಗೀಕರಣವು ತಾತ್ಕಾಲಿಕವಾಗಿದ್ದು, ಬದಲಾವಣೆಯ ಪರತ್ತಿಗೆ ಒಳಪಟ್ಟಿರುತ್ತದೆ. ಈ ಮಾಹಿತಿಯನ್ನು ಕರ್ನಾಟಕ ಅರಣ್ಯ ಇಲಾಖೆಯ ಅಧಿಕೃತ ಜಾಲತಾಣ: **https://aranya.gov.in/**ನಲ್ಲಿ ಮುಖ ಪುಟದ **"ನೇಮಕಾತಿ"** ಶೀರ್ಷಿಕೆ / ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ **https://cetonline.karnataka.gov.in/kea/** ನ ಮೂಲಕ ಪ್ರಕಟಪಡಿಸಲಾಗುವುದು.*

3. ಅರ್ಹತೆ:

(1) ಭಾರತೀಯ ನಾಗರಿಕನಾಗಿರತಕ್ಕದ್ದು.

(2) ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಪತ್ನಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೆ ನೇಮಕಾತಿಗೆ ಅರ್ಹರಾಗುವುದಿಲ್ಲ.

(3) ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಹಾಗೂ ಅವರ ನೇಮಕಾತಿಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟುಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತರಾಗಿರಬೇಕು.

(4) ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ಆಯ್ಕೆ ಪ್ರಾಧಿಕಾರವು

ಕಾಯ್ದಿರಿಸಿಕೊಂಡಿದೆ ಮತ್ತು ಸರ್ಕಾರದ ವಿವೇಚನೆಯು ಯಾವುದೇ ವಿಧದಲ್ಲೂ ಈ ನಿಯಮಗಳ ಮೂಲಕ ಸೀಮಿತವಾಗಿರುವುದಿಲ್ಲ.

(5) ಕೇಂದ್ರ ಅಥವಾ ಕರ್ನಾಟಕ ಅಥವಾ ಇತರೆ ರಾಜ್ಯದ ಲೋಕಸೇವಾ ಆಯೋಗ ಅಥವಾ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ಇತರೆ ಆಯ್ಕೆ ಪ್ರಾಧಿಕಾರಗಳಿಂದ ನಡೆಸಲಾಗುವ ಪರೀಕ್ಷೆಗಳಿಂದ ಅಥವಾ ನೇಮಕಾತಿಗಳಿಂದ ಖಾಯಂ ಆಗಿ ಡಿಬಾರ್ ಆದ ವ್ಯಕ್ತಿಗಳು ನೇಮಕಾತಿಗೆ ಅರ್ಹರಾಗುವುದಿಲ್ಲ.

(6) ಯಾವುದೇ ನೈತಿಕ ಪರಿಭಾಷೆಗೆ ಶಿಕ್ಷೆಗೆ ಒಳಪಟ್ಟ ವ್ಯಕ್ತಿ ಅಥವಾ ಕೇಂದ್ರ ಅಥವಾ ಕರ್ನಾಟಕ ಅಥವಾ ಇತರೆ ರಾಜ್ಯದ ಲೋಕ ಸೇವಾ ಆಯೋಗ ಅಥವಾ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ಇತರೆ ಆಯ್ಕೆ ಪ್ರಾಧಿಕಾರಗಳಿಂದ ನಡೆಸಲಾಗುವ ಪರೀಕ್ಷೆಗಳಿಂದ ಅಥವಾ ನೇಮಕಾತಿಗಳಿಂದ ತಾತ್ಕಾಲಿಕವಾಗಿ ಡಿಬಾರ್ ಆದ ಅಥವಾ ಅನರ್ಹಗೊಂಡ ವ್ಯಕ್ತಿಯು ಸರ್ಕಾರವು ಎಲ್ಲಾ ಸಂದರ್ಭಗಳನ್ನು ಮರು ಪರಿಶೀಲಿಸಿ ಅವರು ನೇಮಕಾತಿಗೆ ಅರ್ಹರೆಂದು ಪರಿಗಣಿಸುವವರೆಗೂ ನೇಮಕಾತಿಗೆ ಅರ್ಹರಾಗುವುದಿಲ್ಲ.

ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

4. ವಿದ್ಯಾರ್ಹತೆ:

ಅಭ್ಯರ್ಥಿಯು ಕರ್ನಾಟಕ ಪದವಿ ಪೂರ್ವ ಶಿಕ್ಷಣ ಮಂಡಳಿಯು ನಡೆಸುವ **ಪಿ.ಯು.ಸಿ.** ವಿದ್ಯಾರ್ಹತೆ **ಅಥವಾ** ಪಿ.ಯು.ಸಿ. ವಿದ್ಯಾರ್ಹತೆಯ **ತತ್ಸಮಾನ** ವಿದ್ಯಾರ್ಹತೆಯನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಹೊಂದಿರಬೇಕು.

ವಿಶೇಷ ಸೂಚನೆ:

(1) ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 81 ಸೇವನೆ 2017 ದಿನಾಂಕ: 27.02.2018ರಲ್ಲಿ ಸ್ಪಷ್ಟಪಡಿಸಿರುವ ಕರ್ನಾಟಕ ಪದವಿ ಪೂರ್ವ ಶಿಕ್ಷಣ ಮಂಡಳಿಯು ನಡೆಸುವ ಪಿ.ಯು.ಸಿ. ವಿದ್ಯಾರ್ಹತೆಯ ತತ್ಸಮಾನ ವಿದ್ಯಾರ್ಹತೆಗಳು ಈ ಕೆಳಗಿನಂತಿವೆ:

*(a) ಸಿ.ಬಿ.ಎಸ್.ಇ. ಮತ್ತು ಐ.ಸಿ.ಎಸ್.ಇ. ಮಂಡಳಿಯು ನಡೆಸುವ ಕ್ಲಾಸ್ 12 ಪರೀಕ್ಷೆ; **ಅಥವಾ***

*(b) ಇತರೆ ರಾಜ್ಯ ಸರ್ಕಾರದ ಪರೀಕ್ಷಾ ಮಂಡಳಿಗಳಿಂದ ನಡೆಸುವ ಕ್ಲಾಸ್ 12 ಪರೀಕ್ಷೆ; **ಅಥವಾ***

*(c) ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್ (ಎನ್.ಐ.ಓ.ಎಸ್.) ವತಿಯಿಂದ ನಡೆಸುವ ಉನ್ನತ ಪ್ರೌಢ ಶಿಕ್ಷಣ ಕೋರ್ಸ್/ಹೆಚ್.ಎಸ್.ಸಿ.; **ಅಥವಾ***

*(d) ಮೂರು ವರ್ಷಗಳ ಡಿಪ್ಲೊಮಾ **ಅಥವಾ** ಎರಡು ವರ್ಷಗಳ ಐ.ಟಿ.ಐ. ಕೋರ್ಸ್ **ಅಥವಾ** ಎರಡು ವರ್ಷಗಳ ವೃತ್ತಿ ಶಿಕ್ಷಣ ಡಿಪ್ಲೊಮಾ (ಜೆ.ಓ.ಸಿ./ಜೆ.ಓ.ಡಿ.ಸಿ./ಜೆ.ಎಲ್.ಡಿ.ಸಿ.) ಅಭ್ಯರ್ಥಿಗಳು **ಎನ್.ಐ.ಓ.ಎಸ್. ನ ವತಿಯಿಂದ ನಡೆಸುವ ಒಂದು ಭಾಷಾ ಕೋರ್ಸ್ ಮತ್ತು ಒಂದು ಶೈಕ್ಷಣಿಕ ವಿಷಯದಲ್ಲಿ (ದೂರಕಲಿಕೆ ಮಾದರಿಯಲ್ಲಿ)** ಅಥವಾ **ಪದವಿಪೂರ್ವ ಮಂಡಳಿಯು ನಡೆಸುವ ಪರೀಕ್ಷೆಯಲ್ಲಿ ಒಂದು ಭಾಷೆ ಮತ್ತು ಒಂದು ವಿಷಯದಲ್ಲಿ ಉತ್ತೀರ್ಣರಾದಲ್ಲಿ ಮಾತ್ರ** ಪಿ.ಯು.ಸಿ. ಗೆ ತತ್ಸಮಾನವೆಂದು ಪರಿಗಣಿಸಬಹುದು.*

** ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಇಡಿ 19 ಟಿಎಂಇ 2019, ದಿನಾಂಕ: 06.08.2021ರಲ್ಲಿ ಕರ್ನಾಟಕ ರಾಜ್ಯ ವೃತ್ತಿ ಶಿಕ್ಷಣ ಕೋರ್ಸ್‌ಗಳು (ಜೆ.ಓ.ಸಿ) ಪಿ.ಯು.ಸಿ.ಗೆ ತತ್ಸಮಾನವೆಂದು ಈ ಕೆಳಕಂಡ ಅಂಶಗಳಿಗೆ ಮಾತ್ರ ಪರಿಗಣಿಸಿ ಆದೇಶಿಸಿದೆ.*

ಪಿ.ಯು.ಸಿ. ಅಥವಾ ಜೆ.ಓ.ಸಿ. ಅಂಕಗಳನ್ನು ಪರಿಗಣಿಸದೇ ಕೇವಲ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಪರಿಗಣಿಸಿ ಉದ್ಯೋಗಕ್ಕೆ ಆಯ್ಕೆ ಮಾಡುವುದಾದರೆ ಜೆ.ಓ.ಸಿ. ಯನ್ನು ಪಿ.ಯು.ಸಿ. ಗೆ ತತ್ಸಮಾನವೆಂದು ಕನಿಷ್ಟ ಶೈಕ್ಷಣಿಕ ಅರ್ಹತೆಯಾಗಿ ಪರಿಗಣಿಸಲು ತಿಳಿಸಲಾಗಿರುತ್ತದೆ. ಆದರೆ, ಗಸ್ತು ಅರಣ್ಯ ಪಾಲಕ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಶೈಕ್ಷಣಿಕ ಅರ್ಹತಾ ಅಂಕಗಳು ಮತ್ತು ಸ್ಪರ್ಧಾತ್ಮಕ ಪರೀಕ್ಷೆ (ಲಿಖಿತ ಪರೀಕ್ಷೆ)ಯ ಅಂಕಗಳೊಂದಿಗೆ ಮೆರಿಟ್ ಪಟ್ಟಿ ತಯಾರಿಸಬೇಕಾಗಿರುವದರಿಂದ ಜೆ.ಓ.ಸಿ. ವಿದ್ಯಾರ್ಹತೆಯನ್ನು ಪರಿಗಣಿಸಲು ಅವಕಾಶವಿರುವುದಿಲ್ಲ.

(2) ಸರ್ಕಾರದ ಆದೇಶ ಸಂಖ್ಯೆ: ಇಪಿ 33 ಟಿಎಂಇ 2021, ದಿನಾಂಕ: 30.09.2021ರಲ್ಲಿ ಮೂರು ವರ್ಷಗಳ ಡಿಪ್ಲೋಮ ವಿದ್ಯಾರ್ಹತೆಯನ್ನು ಪಿ.ಯು.ಸಿ. ವಿದ್ಯಾರ್ಹತೆ ತತ್ಸಮಾನವೆಂದು ಈ ಕೆಳಕಂಡ ಅಂಶಗಳಿಗೆ ಮಾತ್ರ ಪರಿಗಣಿಸಿ ಆದೇಶಿಸಿದೆ.

a) ನೇರ ನೇಮಕಾತಿ/ ಅನುಕಂಪದ ಆಧಾರದ ನೇಮಕಾತಿ ಹೊಂದಲು ಉನ್ನತ ಶಿಕ್ಷಣ ಪಡೆಯಲು ತಾಂತ್ರಿಕ ಶಿಕ್ಷಣ ಇಲಾಖೆಯು ಮೂರು ವರ್ಷಗಳ ಡಿಪ್ಲೋಮ ಶಿಕ್ಷಣವನ್ನು ಪಿ.ಯು.ಸಿ. ಗೆ ತತ್ಸಮಾನವೆಂದು ಪರಿಗಣಿಸುವುದು.

b) 2017ಕ್ಕಿಂತ ಹಿಂದಿನ ವರ್ಷಗಳಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಮೂರು ವರ್ಷಗಳ ಡಿಪ್ಲೋಮ ಉತ್ತೀರ್ಣರಾದ ವಿದ್ಯಾರ್ಥಿಗಳು ಕೆ.ಪಿ.ಎಸ್.ಸಿ. ಯಿಂದ ನಡೆಸುವ ಇಲಾಖಾ ಪರೀಕ್ಷೆಗಳ ಜೊತೆಗೆ ಕನ್ನಡ ಭಾಷಾ ಪರೀಕ್ಷೆಯನ್ನು ತೇರ್ಗಡೆ ಹೊಂದುವುದು.

(3) ಸರ್ಕಾರದ ಆದೇಶ ಸಂಖ್ಯೆ: ಇಪಿ 80 ಡಿಜಿಡಿ 2022, ದಿನಾಂಕ: 11.08.2022ರ ಆದೇಶದನ್ವಯ ಜಿಟಿಟಿಸಿ ನಡೆಸುತ್ತಿರುವ 3+1 (ಒಂದು ವರ್ಷದ ಇನ್‌ಟರ್ನ್‌ಷಿಪ್) ವರ್ಷ ಅವಧಿಯ ಡಿಪ್ಲೋಮಾ ಕೋರ್ಸ್ ತಾಂತ್ರಿಕ ಶಿಕ್ಷಣ ಇಲಾಖೆಯ 03 ವರ್ಷಗಳ ಡಿಪ್ಲೋಮಾ ಕೋರ್ಸ್‌ಗೆ ಸಮನಾಗಿದೆ ಎಂದು ಪರಿಗಣಿಸಿ, ಜಿಟಿಟಿಸಿ ಕೇಂದ್ರವು ನಡೆಸುತ್ತಿರುವ 3+1 ವರ್ಷ ಅವಧಿಯ ಡಿಪ್ಲೋಮಾ ವಿದ್ಯಾರ್ಹತೆಯನ್ನು ಪಿಯುಸಿ ವಿದ್ಯಾರ್ಹತೆಗೆ ತತ್ಸಮಾನವೆಂದು ಪರಿಗಣಿಸಿದೆ.

(4) ಸರ್ಕಾರದ ಪತ್ರ ಸಂಖ್ಯೆ: ಅಪಜೀ 249 ಅಲಸೇ 2022 ದಿನಾಂಕ: 19.04.2023ರಲ್ಲಿ "..... ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಸಿಆಸುಇ 121 ಸೇವನೇ 2021, ದಿನಾಂಕ: 28.11.2022ರ ಆದೇಶದನ್ವಯ ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನೇಮಿಸಿದ್ದ ಸಮಿತಿಯು ನೀಡಿರುವ ವರದಿಯನುಸಾರ **ಕೆಎಸ್‌ಓಯು ನಡೆಸುವ ಬ್ರಿಡ್ಜ್ ಕೋರ್ಸ್ ಪದವಿ ಪೂರ್ವ ಶಿಕ್ಷಣದ ದ್ವಿತೀಯ ಪಿಯುಸಿ ಗೆ ತತ್ಸಮಾನವಾಗಿರುವುದಿಲ್ಲ.**

ಮೇಲೆ ನಮೂದಿಸಿರುವ ವಿದ್ಯಾರ್ಹತೆಯನ್ನು ಹೊಂದದೇ ಇರುವ **ಅಥವಾ** ಇತರೆ ಕಾರಣಗಳಿಂದ ಅನರ್ಹರಿರುವ ಅಭ್ಯರ್ಥಿಗಳು ನೇಮಕಾತಿ ಪ್ರಕ್ರಿಯೆಯಲ್ಲಿ ಅರ್ಜಿ ಸಲ್ಲಿಸಿ, ಯಾವುದೇ ಕಾರಣದಿಂದ ಭಾಗವಹಿಸಿದಲ್ಲಿ, ನಂತರ ನಿಗದಿಪಡಿಸಲಾದ ವಿದ್ಯಾರ್ಹತೆ ಅಂಕಪಟ್ಟಿ ಹೊಂದಿರುವುದಿಲ್ಲವೆಂದು **ಅಥವಾ** ಇತರೆ ಕಾರಣಗಳಿಂದ ಅನರ್ಹರಿರುವುದು ಆಯ್ಕೆ ಪ್ರಾಧಿಕಾರ/ ನೇಮಕಾತಿ ಪ್ರಾಧಿಕಾರಕ್ಕೆ ಕಂಡುಬಂದಲ್ಲಿ, ಅಂತಹ ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು ಯಾವುದೇ ಹಂತದಲ್ಲಾದರೂ ರದ್ದುಪಡಿಸಲಾಗುವುದು ಹಾಗೂ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದೇನೆ ಎಂಬ ಕಾರಣಕ್ಕಾಗಿ ಅಭ್ಯರ್ಥಿಯು ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ. ಈ ಕುರಿತು ಆಯ್ಕೆ ಪ್ರಾಧಿಕಾರ/ ನೇಮಕಾತಿ ಪ್ರಾಧಿಕಾರ ತೆಗೆದುಕೊಳ್ಳುವ ನಿರ್ಣಯವೇ ಅಂತಿಮವಾಗಿರುತ್ತದೆ.

(5) ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ನಿಗದಿತ ವಿದ್ಯಾರ್ಹತೆಯ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳು ಹಾಗೂ ನಿಗದಿತ ವಿದ್ಯಾರ್ಹತೆಯ ಅಂಕಪಟ್ಟಿ ಹೊಂದಿಲ್ಲದೇ ಇರುವ ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಲು ಅರ್ಹರಾಗಿರುವುದಿಲ್ಲ. ಮೇಲಿನ ವಿದ್ಯಾರ್ಹತೆಯನ್ನು ಹೊರತುಪಡಿಸಿ ಬೇರೆ ಯಾವ ವಿದ್ಯಾರ್ಹತೆಯನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಎಲ್ಲಾ ಅಭ್ಯರ್ಥಿಗಳು ಪಿ.ಯು.ಸಿ., 12ನೇ ತರಗತಿ ಅಥವಾ ತತ್ಸಮಾನ ವಿದ್ಯಾರ್ಹತೆಯ ಪರೀಕ್ಷೆಯ ಅಂಕಪಟ್ಟಿಗಳನ್ನು ಹೊಂದಿರಬೇಕು.

(6) ವಿವಿಧ ಪ್ರವರ್ಗಗಳಡಿ ಮೀಸಲಾತಿ ಕೋರುವ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಂದರ್ಭದಲ್ಲಿ ಎಚ್ಚರಿಕೆಯಿಂದ ಮೀಸಲಾತಿ ಅಂಕಣವನ್ನು ಭರ್ತಿ ಮಾಡುವುದು. ತಪ್ಪಿದ್ದಲ್ಲಿ, ಈ ಬಗ್ಗೆ ಅಭ್ಯರ್ಥಿಗಳೇ ಜವಾಬ್ದಾರರಾಗಿರುತ್ತಾರೆ.

5. ವಯೋಮಿತಿ:

ಕರ್ನಾಟಕ ನಾಗರಿಕ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 6ರಲ್ಲಿ ಒಳಗೊಂಡಿರುವ ಯಾವುದೇ ವಿಷಯದ ಹೊರತಾಗಿಯೂ ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು **ಕನಿಷ್ಠ 18 ವರ್ಷವನ್ನು ಹೊಂದಿರತಕ್ಕದ್ದು.**

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 262 ಸೇನೆನಿ 2025, ದಿನಾಂಕ: 29.01.2026ರನ್ವಯ ಈ ಆದೇಶದ ದಿನಾಂಕದ ನಂತರ ಮುಂದಿನ ದಿನಾಂಕ:31.12.2027ರವರೆಗೆ ನೇರ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಿ ಹೊರಡಿಸುವ ಅಧಿಸೂಚನೆಗಳನ್ವಯ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಎಲ್ಲಾ

ಪ್ರವರ್ಗಗಳ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯಲ್ಲಿ ಒಂದು ಬಾರಿಯ ಕ್ರಮವಾಗಿ (as a one-time measure) 5 ವರ್ಷಗಳ ಸಡಿಲಿಕೆಯನ್ನು ನೀಡಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಅದನ್ನು ಅಳವಡಿಸಿಕೊಂಡ ನಂತರ ಅಭ್ಯರ್ಥಿಗಳು ಈ ಕೆಳಕಂಡ ಗರಿಷ್ಠ ವಯೋಮಿತಿಯನ್ನು ಮೀರಬಾರದು.

ಸಾಮಾನ್ಯ ಅಭ್ಯರ್ಥಿ	ಗರಿಷ್ಠ ವಯೋಮಿತಿ 32 ವರ್ಷ
ಪ್ರವರ್ಗ IIಎ, IIಬಿ, IIIಎ, IIIಬಿ ಹಿಂದುಳಿದ ಪ್ರವರ್ಗಗಳು	ಗರಿಷ್ಠ ವಯೋಮಿತಿ 35 ವರ್ಷ
ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-I	ಗರಿಷ್ಠ ವಯೋಮಿತಿ 37 ವರ್ಷ
ಮಾಜಿ ಸೈನಿಕರಿಗೆ ವಯೋಮಿತಿ:	ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸಿ ನಿಯಮಾನುಸಾರ ನಿವೃತ್ತಿ/ಡಿಮೊಬಿಲೈಸೇಷನ್ (Demobilisation) ಅಥವಾ ರಿಟ್ರೆಂಚ್‌ಮೆಂಟ್ (Retrenchment) ಹೊಂದಿದ ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಅವರು ಯಾವ ಪ್ರವರ್ಗಕ್ಕೆ ಸೇರಿರುತ್ತಾರೆಯೊ ಈ ಮೇಲಿನ ಪ್ರವರ್ಗಕ್ಕೆ ನಿಗದಿಪಡಿಸಿದ ಗರಿಷ್ಠ ವಯೋಮಿತಿಗೆ ಅವರು ಎಷ್ಟು ವರ್ಷ ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸಿರುವರೋ ಅಷ್ಟು ವರ್ಷಗಳಿಗೆ ಮೂರು (3) ವರ್ಷ ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳ ಸಡಿಲಿಕೆಯನ್ನು ನೀಡಲಾಗುವುದು.
ಅರಣ್ಯ ಪ್ರೇರಕರಿಗೆ ವಯೋಮಿತಿ: ಈ ಅಧಿಸೂಚನೆಯ ದಿನಾಂಕಕ್ಕೆ ಅರಣ್ಯ ಇಲಾಖೆಯಲ್ಲಿ ನಿರಂತರ ಕನಿಷ್ಠ 5 ವರ್ಷಗಳ ಸೇವೆಯನ್ನು ಅರಣ್ಯ ಪ್ರೇರಕರಾಗಿ ಪೂರೈಸಿದ್ದು, ಪ್ರಸ್ತುತ ಅರಣ್ಯ ಪ್ರೇರಕರಾಗಿ ಸೇವೆಯಲ್ಲಿ ಇದ್ದು ನಿಶ್ಚಿತ ಗೌರವಧನವನ್ನು ಪಡೆಯುತ್ತಿರುವ ಅರಣ್ಯ ಪ್ರೇರಕರಿಗೆ ಮಾತ್ರ ಈ ಕೆಳಗಿನ ಗರಿಷ್ಠ ವಯೋಮಿತಿ ಅನ್ವಯವಾಗುವುದು.	
ಸಾಮಾನ್ಯ ಅಭ್ಯರ್ಥಿ	ಗರಿಷ್ಠ ವಯೋಮಿತಿ 43 ವರ್ಷ
ಪ್ರವರ್ಗ IIಎ, IIಬಿ, IIIಎ, IIIಬಿ ಹಿಂದುಳಿದ ಪ್ರವರ್ಗಗಳು	ಗರಿಷ್ಠ ವಯೋಮಿತಿ 46 ವರ್ಷ
ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-I	ಗರಿಷ್ಠ ವಯೋಮಿತಿ 48 ವರ್ಷ

6. ಅರ್ಜಿಗಳ ಪರಾಮರ್ಶೆ:

ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಾವಳಿಗಳು 2021 ಮತ್ತು ಅದರ ತಿದ್ದುಪಡಿ ನಿಯಮಗಳನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: FEE 203 FEG 2015 ದಿನಾಂಕ: 06.08.2019ರ ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು, 2019ರನ್ವಯ ಹಾಗೂ ಪ್ರಸ್ತುತ ಚಾಲ್ತಿಯಲ್ಲಿರುವ ನೇರ ಮತ್ತು ಸಮತಳ ಮೀಸಲಾತಿ ನಿಯಮಗಳಂತೆ ಮೀಸಲಾತಿ ವರ್ಗೀಕರಣ ನಿಗದಿಪಡಿಸಲಾಗಿದೆ. ಅಭ್ಯರ್ಥಿಯು ಆನ್‌ಲೈನ್ (Online) (ಎಲೆಕ್ಟ್ರಾನಿಕ್ ಮಾರ್ಗ) ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನಮೂದಿಸಿರುವ ಮಾಹಿತಿ ಮತ್ತು ಎಲ್ಲಾ ಪ್ರಮಾಣ ಪತ್ರ/ ದಾಖಲಾತಿಗಳ ಆಧಾರದ ಮೇಲೆ ಅರ್ಜಿಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದು. **ಕ್ರಮಬದ್ಧವಲ್ಲದ/ ಅಪೂರ್ಣ/ ಅಸ್ಪಷ್ಟವಾದ ಮಾಹಿತಿಯಿಂದ ಕೂಡಿದ ಅರ್ಜಿಗಳನ್ನು ಪ್ರಾಥಮಿಕ ಹಂತದಲ್ಲಿಯೇ ತಿರಸ್ಕರಿಸಲಾಗುವುದು.**

ಆನ್‌ಲೈನ್ (Online) (ಎಲೆಕ್ಟ್ರಾನಿಕ್ ಮಾರ್ಗ)ನಲ್ಲಿ ಸ್ವೀಕೃತವಾದ ಅರ್ಜಿಗಳಲ್ಲಿ ಅಭ್ಯರ್ಥಿಗಳು ಭರ್ತಿ ಮಾಡಿರುವ ಮಾಹಿತಿ/ ವಿವರಗಳ ಆಧಾರದನ್ವಯ ಆಯ್ಕೆ ಪ್ರಾಧಿಕಾರವು, ಅಭ್ಯರ್ಥಿಗಳು ಕರ್ನಾಟಕ ಪದವಿ ಪೂರ್ವ ಶಿಕ್ಷಣ ಮಂಡಳಿಯು ನಡೆಸುವ ಪಿ.ಯು.ಸಿ. ವಿದ್ಯಾರ್ಹತೆ **ಅಥವಾ** ಪಿ.ಯು.ಸಿ. ವಿದ್ಯಾರ್ಹತೆಯ ತತ್ಸಮಾನ **ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ 1:20 (ಹುದ್ದೆ:ಅಭ್ಯರ್ಥಿ)** ಅನುಪಾತದಲ್ಲಿ ಶಾರೀರಿಕ ಮಾನದಂಡಗಳ ಪರೀಕ್ಷೆ [Physical Standard Test], ದೈಹಿಕ ತಾಳ್ಮಿಕೆ ಪರೀಕ್ಷೆ [Physical Endurance Test] ಮತ್ತು ದೈಹಿಕ ಕಾರ್ಯ ಸಮರ್ಥತೆ [Physical Efficiency Test] ಪರೀಕ್ಷೆಗಾಗಿ ಅಭ್ಯರ್ಥಿಗಳ ವೃತ್ತ ಮಟ್ಟದ ಅರ್ಹತಾ ಪಟ್ಟಿಯನ್ನು ಸಿದ್ಧಪಡಿಸಿ, ಕರ್ನಾಟಕ ಅರಣ್ಯ ಇಲಾಖೆಯ ಅಧಿಕೃತ ಜಾಲತಾಣ: **https://aranya.gov.in/**ನಲ್ಲಿ ಮುಖ ಪುಟದ **"ನೇಮಕಾತಿ"** ಶೀರ್ಷಿಕೆಯಲ್ಲಿ ಮತ್ತು *ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್* ***https://cetonline.karnataka.gov.in/kea/*** *ನ ಮೂಲಕ*

ಪ್ರಕಟಪಡಿಸಲಾಗುವುದು. **ಈ ಕುರಿತು ಇಲಾಖೆಯ ವತಿಯಿಂದ ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರ ನಡೆಸಲಾಗುವುದಿಲ್ಲ. ಅರ್ಜಿಯಲ್ಲಿ ನಮೂದಿಸಿರುವ ಮೊಬೈಲ್ ಸಂಖ್ಯೆಗೆ ಸಂದೇಶ ನೀಡಲಾಗುವುದು.**

7. ಶಾರೀರಿಕ ಮಾನದಂಡಗಳ ಪರೀಕ್ಷೆ [Physical Standard Test]:

7.1. ಶಾರೀರಿಕ ಮಾನದಂಡಗಳು [Physical Standard]

ಪುರುಷ ಅಭ್ಯರ್ಥಿಗಳು:		
ದೇಹದಾರ್ಢ್ಯತೆ	**ಇತರೆ ಪ್ರವರ್ಗಗಳ ಎಲ್ಲಾ ಅಭ್ಯರ್ಥಿಗಳು**	**ಪರಿಶಿಷ್ಟ ಪಂಗಡ -ಸ್ಥಳೀಯ ಅರಣ್ಯ ಬುಡಕಟ್ಟು ಅಭ್ಯರ್ಥಿಗಳು *(ST- Local Forest Dwelling Tribe Candidates)***
ಎತ್ತರ:	ಕನಿಷ್ಠ 163 ಸೆ.ಮೀ.	ಕನಿಷ್ಠ 152 ಸೆ.ಮೀ.
ಎದೆ ಸುತ್ತಳತೆ:	ಸಾಮಾನ್ಯ ಸ್ಥಿತಿಯಲ್ಲಿ ಕನಿಷ್ಠ 79 ಸೆ.ಮೀ.	ಸಾಮಾನ್ಯ ಸ್ಥಿತಿಯಲ್ಲಿ ಕನಿಷ್ಠ 74 ಸೆ.ಮೀ.
ಎದೆ ಕನಿಷ್ಠ ಹಿಗ್ಗುವಿಕೆ:	5 ಸೆ.ಮೀ.	5 ಸೆ.ಮೀ.

ಮಹಿಳಾ ಅಭ್ಯರ್ಥಿಗಳು:		
ದೇಹದಾರ್ಢ್ಯತೆ	**ಇತರೆ ಪ್ರವರ್ಗಗಳ ಎಲ್ಲಾ ಅಭ್ಯರ್ಥಿಗಳು**	**ಪರಿಶಿಷ್ಟ ಪಂಗಡ - ಸ್ಥಳೀಯ ಅರಣ್ಯ ಬುಡಕಟ್ಟು ಅಭ್ಯರ್ಥಿಗಳು *(ST- Local Forest Dwelling Tribe Candidates)***
ಎತ್ತರ:	ಕನಿಷ್ಠ 150 ಸೆ.ಮೀ.	ಕನಿಷ್ಠ 145 ಸೆ.ಮೀ.
ಕನಿಷ್ಠ ತೂಕ:	40 ಕೆ.ಜಿ.	38 ಕೆ.ಜಿ.

ಟಿಪ್ಪಣಿ:

ಪುರುಷ ಅಭ್ಯರ್ಥಿಗಳಿಗೆ ಅನ್ವಯವಾಗುವ ಮೇಲ್ಕಂಡ ಎಲ್ಲಾ ಶಾರೀರಿಕ ಮಾನದಂಡಗಳು ***ಪುರುಷ ತೃತೀಯ ಲಿಂಗ*** *ಅಭ್ಯರ್ಥಿಗಳಿಗೆ ಹಾಗೂ ಮಹಿಳಾ ಅಭ್ಯರ್ಥಿಗಳಿಗೆ ಅನ್ವಯವಾಗುವ ಮೇಲ್ಕಂಡ ಎಲ್ಲಾ ಶಾರೀರಿಕ ಮಾನದಂಡಗಳು* ***ಮಹಿಳಾ ತೃತೀಯ ಲಿಂಗ*** *ಅಭ್ಯರ್ಥಿಗಳಿಗೆ ಅನ್ವಯವಾಗಲಿದೆ.*

7.2. ಈ ಕೆಳಕಂಡ ದೈಹಿಕ ನ್ಯೂನ್ಯತೆ[Physical defects]ಗಳನ್ನು ಹೊಂದಿರುವ ಅಭ್ಯರ್ಥಿಗಳು ಆಯ್ಕೆಗೆ ಅನರ್ಹರಾಗಿರುತ್ತಾರೆ:

(1) ತಾಗು ಮಂಡಿಗಳು (Knock-knees);
(2) ಬಾಗಿದ ಕಾಲುಗಳು (Bow legs);
(3) ಚಪ್ಪಟೆ ಪಾದ (Flat feet);
(4) ನರ ಊತವಿರುವವರು (Varicose veins);
(5) ಮಾತನಾಡಲು ಮತ್ತು ಕೇಳುವ ಸಾಮರ್ಥ್ಯದಲ್ಲಿ ತೊಡಕು (Impediment in speech and hearing);
(6) ಪುರುಷ ಅಭ್ಯರ್ಥಿಗಳಿಗೆ ಅಂಡವಾಯು (Hydrocele in men);
(7) ದೃಷ್ಟಿ / ವರ್ಣಾಂಧತ್ವ / ಇರುಳು ಕುರುಡು (Vision / Colour blindness / Night blindness)

7.3. ದೃಷ್ಟಿ ಸಾಮರ್ಥ್ಯ [Eye vision]:

ಅಭ್ಯರ್ಥಿಗಳು ಈ ಕೆಳಗೆ ನಿಗದಿಪಡಿಸಿರುವ ದೃಷ್ಟಿ ಸಾಮರ್ಥ್ಯವನ್ನು ಕನ್ನಡಕ ಸಹಿತ **ಅಥವಾ** ಕನ್ನಡಕ ರಹಿತ ಕಡ್ಡಾಯವಾಗಿ ಹೊಂದಿರಬೇಕು ಹಾಗೂ ದೃಷ್ಟಿ ಸಾಮರ್ಥ್ಯ ಕುರಿತು ಈ ಕೆಳಕಂಡ ಪರೀಕ್ಷೆಗಳನ್ನು ನಡೆಸಲಾಗುವುದು.

ದೂರ ದೃಷ್ಟಿ (Distant vision)			ಸಮೀಪ ದೃಷ್ಟಿ (Near vision)		
ದೋಷರಹಿತ ಕಣ್ಣು	ಅಥವಾ	ದೋಷಪೂರಿತ ಕಣ್ಣು	ದೋಷರಹಿತ ಕಣ್ಣು	ಅಥವಾ	ದೋಷಪೂರಿತ ಕಣ್ಣು

(Better eye)		(Worse eye)	(Better eye)		(Worse eye)
6/6 ಮೀಟರ್	ಅಥವಾ	6/9 ಮೀಟರ್	0/6 ಮೀಟರ್	ಅಥವಾ	0/8 ಮೀಟರ್

ಕಣ್ಣಿನ ಬಣ್ಣ ದೃಷ್ಟಿ ಪರೀಕ್ಷೆಯು ಅತ್ಯಗತ್ಯವಾಗಿರುತ್ತದೆ.

ಕೆಳಗಿನ ಕೋಷ್ಟಕದಲ್ಲಿ ವಿವರಿಸಿದಂತೆ ಲ್ಯಾನ್‌ಟರ್ನ್‌ನಲ್ಲಿನ ದ್ಯುತಿರಂಧ್ರದ ಗಾತ್ರವನ್ನು ಅವಲಂಬಿಸಿ ಬಣ್ಣದ ಗ್ರಹಿಕೆಯನ್ನು ಉನ್ನತ ಮತ್ತು ಕಡಿಮೆ ದರ್ಜೆಗೆ ವರ್ಗೀಕರಿಸಬೇಕು.

ವಿವರಗಳು	ಉನ್ನತ ದರ್ಜೆಯ ಬಣ್ಣ ಗ್ರಹಿಕೆ	ಕಡಿಮೆ ದರ್ಜೆಯ ಬಣ್ಣ ಗ್ರಹಿಕೆ
ದೀಪ ಮತ್ತು ಅಭ್ಯರ್ಥಿಯ ನಡುವಿನ ಅಂತರ	16 ಅಡಿ	16 ಅಡಿ
ದ್ಯುತಿರಂಧ್ರದ ಗಾತ್ರ	1.3 ಮಿ.ಮೀ	1.3 ಮಿ.ಮೀ
ಮಾನ್ಯತೆ ಸಮಯ	5 ಸೆಕೆಂಡುಗಳು	5 ಸೆಕೆಂಡುಗಳು

ಕಡಿಮೆ ದರ್ಜೆಯ ಬಣ್ಣ ದೃಷ್ಟಿಯನ್ನು ಪರ್ಯಾಪ್ತವೆಂದು (sufficient) ಪರಿಗಣಿಸಲಾಗುತ್ತದೆ.

ಪ್ರತಿ ಕಣ್ಣು ಸಂಪೂರ್ಣ ದೃಷ್ಟಿ ಹೊಂದಿರಬೇಕು. ವರ್ಣಾಂಧತೆ, ಮೆಳ್ಳಗಣ್ಣು **ಅಥವಾ** ಯಾವುದೇ ಕಣ್ಣಿನ **ಅಥವಾ** ರೆಪ್ಪೆಯ ವಿಕೃತ ಸ್ಥಿತಿಯನ್ನು ಅನರ್ಹತೆ ಎಂದು ಪರಿಗಣಿಸಲಾಗುವುದು.

7.4. ಶ್ರವಣ ಪರೀಕ್ಷೆ [Hearing Test]:

ಅಭ್ಯರ್ಥಿಗಳ ಶ್ರವಣ ಪರೀಕ್ಷೆಯನ್ನು ಪರೀಕ್ಷಿಸಲು ಈ ಕೆಳಕಂಡ ಪರೀಕ್ಷೆಗಳನ್ನು ನಡೆಸಲಾಗುವುದು.

1. ರಿನ್ನರ್ ಪರೀಕ್ಷೆ (Rinner's Test);
2. ವೆಬ್ಬರ್ ಪರೀಕ್ಷೆ (Webber's Test);
3. ತಲೆತಿರುಗುವಿಕೆಗಾಗಿ ಪರೀಕ್ಷೆ (Tests for Vertigo)

ಮೇಲಿನ ಪರೀಕ್ಷೆಗಳಲ್ಲಿ ಯಾವುದಾದರೂ ಶ್ರವಣ ದೋಷವಿದೆಯೆಂದು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಗಳು ಆಯ್ಕೆಗೆ ಅನರ್ಹರಾಗುತ್ತಾರೆ.

ವಿಶೇಷ ಸೂಚನೆ:

(i) ಅರ್ಹ ಅಭ್ಯರ್ಥಿಗಳಿಗೆ ವೈದ್ಯಕೀಯ ಪರೀಕ್ಷೆಗಳನ್ನು ಆಯ್ಕೆ ಪ್ರಾಧಿಕಾರದ ಮೇಲ್ವಿಚಾರಣೆಯಲ್ಲಿ ನಡೆಸಲಾಗುವುದು.

(ii) ಅಭ್ಯರ್ಥಿಯನ್ನು ವೈದ್ಯಕೀಯ ಪರೀಕ್ಷೆಯಲ್ಲಿ ವೈದ್ಯಕೀಯವಾಗಿ ಅನರ್ಹಗೊಳಿಸಿದರೆ, ಅಭ್ಯರ್ಥಿಯು ವೈದ್ಯಕೀಯ ಪರೀಕ್ಷೆಯ ಕುರಿತು ಅನರ್ಹಗೊಳಿಸಿದ ದಿನಾಂಕದಿಂದ ಗರಿಷ್ಠ 07 ದಿವಸದೊಳಗೆ ಆಯ್ಕೆ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಬಹುದಾಗಿರುತ್ತದೆ. ಆಯ್ಕೆ ಪ್ರಾಧಿಕಾರವು ಅಭ್ಯರ್ಥಿಯ ಮೇಲ್ಮನವಿಯ ಕುರಿತು ವೈದ್ಯಕೀಯ ಮಂಡಳಿಯ ಮುಂದೆ ಆಭ್ಯರ್ಥಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗುವುದು. ಈ ಮೇಲ್ಮನವಿಯ ಕುರಿತು ವೈದ್ಯಕೀಯ ಮಂಡಳಿಯು ನೀಡುವ ವೈದ್ಯಕೀಯ ವರದಿಯೇ ಅಂತಿಮವಾಗಿರುತ್ತದೆ.

8. ದೈಹಿಕ ತಾಳ್ಮಿಕೆ ಪರೀಕ್ಷೆ [Physical Endurance Test]:

ಪುರುಷ ಅಭ್ಯರ್ಥಿಗಳು	:	1600 ಮೀಟರ್ ಓಟ	07 ನಿಮಿಷಗಳ ಅವಧಿಯಲ್ಲಿ ಪೂರ್ಣಗೊಳಿಸಬೇಕು.
ಮಹಿಳಾ ಅಭ್ಯರ್ಥಿಗಳು ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳು	:	1000 ಮೀಟರ್ ಓಟ	06 ನಿಮಿಷಗಳ ಅವಧಿಯಲ್ಲಿ ಪೂರ್ಣಗೊಳಿಸಬೇಕು.

ವಿಶೇಷ ಸೂಚನೆ:

ದೈಹಿಕ ತಾಳ್ಮಿಕೆ ಪರೀಕ್ಷೆಯಲ್ಲಿ ಅನರ್ಹರಾದ ಅಭ್ಯರ್ಥಿಗಳನ್ನು ಮುಂದಿನ ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗುವುದು. ದೈಹಿಕ ತಾಳ್ಮಿಕೆ ಪರೀಕ್ಷೆಯಲ್ಲಿ ಅರ್ಹರಾಗುವ ಅಭ್ಯರ್ಥಿಗಳನ್ನು ಮಾತ್ರ ಮುಂದಿನ ಹಂತದ ದೈಹಿಕ ಸಾಮರ್ಥ್ಯತೆ ಪರೀಕ್ಷೆಗೆ (PET) ಪರಿಗಣಿಸಲಾಗುವುದು.

9. ದೈಹಿಕ ಸಾಮರ್ಥ್ಯ ಪರೀಕ್ಷೆ [Physical Efficiency Test]:

ಕ್ರ. ಸಂ.	ಕ್ರೀಡಾ ಚಟುವಟಿಕೆ	ಅರ್ಹತಾ ಸಮಯ / ದೂರ [Qualifying time/ distance]	
		ಪುರುಷ ಅಭ್ಯರ್ಥಿಗಳು	ಮಹಿಳಾ ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳು
1	100 ಮೀಟರ್ ಓಟ	15 ಸೆಕೆಂಡುಗಳು	18.5 ಸೆಕೆಂಡುಗಳು
2	ಎತ್ತರ ಜಿಗಿತ (High Jump)	1.20 ಮೀಟರ್	0.90 ಮೀಟರ್
3	ಉದ್ದ ಜಿಗಿತ (Long Jump)	3.80 ಮೀಟರ್	2.50 ಮೀಟರ್
4	ಶಾಟ್‌ಪುಟ್ (Shotput) ಪುರುಷ: 16 ಎಲ್.ಬಿ. ಮಹಿಳೆ: 8 ಎಲ್.ಬಿ.	5.60 ಮೀಟರ್	3.76 ಮೀಟರ್
5(ಎ)	800 ಮೀಟರ್ ಓಟ	2 ನಿಮಿಷ 50 ಸೆಕೆಂಡುಗಳು	-
5(ಬಿ)	200 ಮೀಟರ್ ಓಟ	-	40 ಸೆಕೆಂಡುಗಳು

ಸೂಚನೆ: *ಅಭ್ಯರ್ಥಿಗಳು ಮುಂದಿನ ಆಯ್ಕೆ ಪ್ರಕ್ರಿಯೆಗೆ ಅರ್ಹತೆ ಹೊಂದಲು ಈ ಮೇಲಿನ ಐದು (5) ವಿವಿಧ ದೈಹಿಕ ಸಮರ್ಥತ ಪರೀಕ್ಷೆಗಳ ಪೈಕಿ* ***ಕನಿಷ್ಠ ಮೂರು (3) ಪರೀಕ್ಷೆಗಳಲ್ಲಿ ಕಡ್ಡಾಯವಾಗಿ ತೇರ್ಗಡೆ ಹೊಂದತಕ್ಕದ್ದು.*** *ದೈಹಿಕ ಸಮರ್ಥತ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳನ್ನು ಮಾತ್ರ ಮುಂದಿನ ಆಯ್ಕೆ ಪ್ರಕ್ರಿಯೆಗೆ ಪರಿಗಣಿಸಲಾಗುವುದು.*

ಟಿಪ್ಪಣಿ:

(1) ಪುರುಷ ಅಭ್ಯರ್ಥಿಗಳಿಗೆ ಅನ್ವಯವಾಗುವ ಮೇಲ್ಕಂಡ ಎಲ್ಲಾ ದೈಹಿಕ ತಾಳ್ಮಿಕೆ ಹಾಗೂ ದೈಹಿಕ ಸಮರ್ಥತೆ ಪರೀಕ್ಷೆಗಳನ್ನು **ಪುರುಷ ತೃತೀಯ ಲಿಂಗ** ಅಭ್ಯರ್ಥಿಗಳಿಗೆ ಹಾಗೂ ಮಹಿಳಾ ಅಭ್ಯರ್ಥಿಗಳಿಗೆ ಅನ್ವಯವಾಗುವ ಮೇಲ್ಕಂಡ ಎಲ್ಲಾ ದೈಹಿಕ ತಾಳ್ಮಿಕೆ ಹಾಗೂ ದೈಹಿಕ ಸಮರ್ಥತೆ ಪರೀಕ್ಷೆಗಳನ್ನು **ಮಹಿಳಾ ತೃತೀಯ ಲಿಂಗ** ಅಭ್ಯರ್ಥಿಗಳಿಗೆ ಅನುಸರಿಸಲಾಗುವುದು.

(2) ಅಭ್ಯರ್ಥಿಗಳು ಶಾರೀರಿಕ ಮಾನದಂಡಗಳ ಪರೀಕ್ಷೆ [Physical Standard Test], ದೈಹಿಕ ತಾಳ್ಮಿಕೆ ಪರೀಕ್ಷೆ [Physical Endurance Test] ಮತ್ತು ದೈಹಿಕ ಕಾರ್ಯ ಸಮರ್ಥತೆ [Physical Efficiency Test] ಪರೀಕ್ಷೆಗಳಿಗೆ ಹಾಜರಾಗುವಾಗ, ಕರೆ ಪತ್ರದ ಜೊತೆಗೆ ಈ ಕೆಳಕಂಡ ಯಾವುದಾದರೂ ಒಂದು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು ಮತ್ತು ಅದರ ಒಂದು **ಸ್ವಯಂ ದೃಢೀಕೃತ** ಪ್ರತಿಯನ್ನು ಆಯ್ಕೆ ಪ್ರಾಧಿಕಾರ/ ನೇಮಕಾತಿ ಪ್ರಾಧಿಕಾರಕ್ಕೆ ನೀಡುವುದು.

(i) ಆಧಾರ್ ಕಾರ್ಡ್ (Aadhar Card)
(ii) ಪಾಸ್‌ಪೋರ್ಟ್ (Passport)
(iii) ಚಾಲನಾ ಪರವಾನಗಿ ಪತ್ರ (Driving License)
(iv) ಪ್ಯಾನ್ ಕಾರ್ಡ್ (PAN Card)
(v) ರಾಜ್ಯ ಸರ್ಕಾರ/ ಕೇಂದ್ರ ಸರ್ಕಾರ/ ಸಾರ್ವಜನಿಕ ಸ್ವಾಮ್ಯದ ಅಥವಾ ಸರ್ಕಾರದ ಅಧೀನಕ್ಕೆ ಒಳಪಟ್ಟ ಖಾಸಗಿ ಕಂಪನಿಗಳು ವಿತರಿಸಿರುವ ಭಾವಚಿತ್ರವಿರುವ ಸೇವಾ ಗುರುತಿನ ಚೀಟಿ (Service ID Card)
(vi) ಸಾರ್ವಜನಿಕ ಬ್ಯಾಂಕ್‌ಗಳು/ ಅಂಚೆ ಕಛೇರಿಗಳು ವಿತರಿಸಿರುವ ಭಾವಚಿತ್ರ ಪಾಸ್‌ಪುಸ್ತಕ (Bank Pass Book with photograph)
(vii) ಭಾವಚಿತ್ರ ಸಮೇತ ನೋಂದಣಿಯಾಗಿರುವ ಸ್ವತ್ತಿನ ದಾಖಲಾತಿ ಪತ್ರ ಅಥವಾ ಪಟ್ಟಾ ಪುಸ್ತಕ (Pattas and registered deeds with photograph)
(viii) ಭಾವಚಿತ್ರ ಸಮೇತ ಸಂಬಂಧಪಟ್ಟ ಪ್ರಾಧಿಕಾರಿಯವರು ವಿತರಿಸಿರುವ ಜಾತಿ ಪ್ರಮಾಣ ಪತ್ರ (Community certificate with photograph)

(ix) ಮಾಜಿ ಸೈನಿಕ ಅಭ್ಯರ್ಥಿಗಳಿಗೆ ವಿತರಿಸಿರುವ ಪಿಂಚಣಿ ಪುಸ್ತಕ/ ಪಿಂಚಣಿ ಮಂಜೂರಾತಿ ಆಗಿರುವ ಆದೇಶ (Ex-servicemen's pension book/ pension payment order)

(x) ಎಂ.ಜಿ.ಎನ್.ಆರ್.ಇ.ಜಿ.ಎ. / ವಿಕಸಿತ ಭಾರತ-ಗ್ಯಾರಂಟಿ ಫಾರ್ ರೋಜ್ಗಾರ್ ಅಂಡ್ ಆಜೀವಿಕ ಮಿಷನ್ (VB-G RAM G) ಇಂದ ನೀಡಿದ ಭಾವಚಿತ್ರವಿರುವ ಉದ್ಯೋಗ ಚೀಟಿ (MGNREGA / VB-G RAM G – Job card with photograph)

(xi) ಎಲೆಕ್ಟೋರಲ್ ಫೋಟೋ ಗುರುತಿನ ಚೀಟಿ (EPIC)

(3) ಕರೆ ಪತ್ರದ (Hall Ticket) ಜೊತೆಗೆ ಆನ್‌ಲೈನ್ (Online) (ಎಲೆಕ್ಟ್ರಾನಿಕ್ ಮಾರ್ಗ) ಅರ್ಜಿಯ ಜೆರಾಕ್ಸ್ ಪ್ರತಿಯನ್ನು ಸಹ ತರತಕ್ಕದ್ದು, **ತಪ್ಪಿದಲ್ಲಿ ಮೇಲಿನ ಪರೀಕ್ಷೆಗಳಿಗೆ ಹಾಜರಾಗಲು ಅನುಮತಿ ನೀಡಲಾಗುವುದಿಲ್ಲ.** ನಿಗದಿತ ದಿನಾಂಕ ಹಾಗೂ ಸಮಯದಲ್ಲಿ ಹಾಜರಾಗದಿದ್ದರೆ ಅಂತಹ ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು ರದ್ದು/ ಅನರ್ಹಗೊಳಿಸಲಾಗುವುದು ಹಾಗೂ ಬದಲಿ ದಿನಾಂಕವನ್ನು ನೀಡಲಾಗುವುದಿಲ್ಲ.

ವಿಶೇಷ ಸೂಚನೆ:

(i) ದೈಹಿಕ ತಾಳ್ಮಿಕೆ ಹಾಗೂ ದೈಹಿಕ ಸಾಮರ್ಥ್ಯ ಪರೀಕ್ಷೆಗಳಿಗೆ ಹಾಜರಾಗುವ ಮುನ್ನ ಅಭ್ಯರ್ಥಿಗಳು ದೈಹಿಕವಾಗಿ ಸದೃಢರಿರಬೇಕು. ಈ ಪರೀಕ್ಷೆಗಳ ಸಂದರ್ಭದಲ್ಲಿ ಸಂಭವಿಸುವ ಯಾವುದೇ ರೀತಿಯ ಅನಾಹುತ/ಅವಘಡ/ತೊಂದರೆಗಳಿಗೆ ಅರಣ್ಯ ಇಲಾಖೆ/ಆಯ್ಕೆ ಪ್ರಾಧಿಕಾರ/ನೇಮಕಾತಿ ಪ್ರಾಧಿಕಾರ / ಪರೀಕ್ಷಾ ಪ್ರಾಧಿಕಾರ ಜವಾಬ್ದಾರರಾಗಿರುವುದಿಲ್ಲ. ಅಭ್ಯರ್ಥಿಗಳು ಅವರ ಸ್ವಂತ ಹಿತದೃಷ್ಟಿಯಿಂದ ಅವರ ದೇಹದ ವೈದ್ಯಕೀಯ ಪರೀಕ್ಷೆಯನ್ನು ಮಾಡಿಸಿಕೊಂಡು ಅಭ್ಯರ್ಥಿಯ ಆರೋಗ್ಯವು ಎಲ್ಲಾ ರೀತಿಯಿಂದಲೂ ಸದೃಢವಾಗಿದೆ ಎಂದು ಖಚಿತಪಡಿಸಿಕೊಂಡು, ಇಲಾಖೆ ನಡೆಸುವ ದೈಹಿಕ ತಾಳ್ಮಿಕೆ ಹಾಗೂ ದೈಹಿಕ ಸಾಮರ್ಥ್ಯ ಪರೀಕ್ಷೆಗೆ ಎಲ್ಲಾ ವಿಧದಿಂದಲೂ ಅರ್ಹನೆಂದು ಮುಂಚಿತವಾಗಿಯೇ ತಿಳಿದುಕೊಂಡು ಹಾಜರಾಗತಕ್ಕದ್ದು. ಈ ದಿಸೆಯಲ್ಲಿ ಮುಂಚೆಯಿಂದಲೇ ದೈಹಿಕ ತಾಳ್ಮಿಕೆ ಹಾಗೂ ದೈಹಿಕ ಸಮರ್ಥತೆ ಪರೀಕ್ಷೆಗೆ ಅಭ್ಯರ್ಥಿಗಳು ಸಾಕಷ್ಟು ಅಭ್ಯಾಸ/ತಾಲೀಮು ಮಾಡಿಕೊಳ್ಳತಕ್ಕದ್ದು. ಈ ಪರೀಕ್ಷೆಗಳಿಗೆ ಅಭ್ಯರ್ಥಿಗಳು ತಮ್ಮ ಸ್ವಂತ ಜವಾಬ್ದಾರಿ ಹಾಗೂ ಸ್ವ ಇಚ್ಛೆಯಿಂದ ಭಾಗವಹಿಸುವುದು.

(ii) ಅಭ್ಯರ್ಥಿಗಳು ಮುಂದಿನ ಆಯ್ಕೆ ಪ್ರಕ್ರಿಯೆಗೆ ಅರ್ಹತೆ ಹೊಂದಲು ಈ ಮೇಲಿನ ಐದು (5) ವಿವಿಧ ದೈಹಿಕ ಸಾಮರ್ಥ್ಯ ಪರೀಕ್ಷೆಗಳ ಪೈಕಿ ಕನಿಷ್ಠ ಮೂರು (3) ಪರೀಕ್ಷೆಗಳಲ್ಲಿ ಕಡ್ಡಾಯವಾಗಿ ತೇರ್ಗಡೆ ಹೊಂದತಕ್ಕದ್ದು. ದೈಹಿಕ ಸಾಮರ್ಥ್ಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳನ್ನು ಮಾತ್ರ ಮುಂದಿನ ಆಯ್ಕೆ ಪ್ರಕ್ರಿಯೆಗೆ ಪರಿಗಣಿಸಲಾಗುವುದು. ದೈಹಿಕ ಸಾಮರ್ಥ್ಯ ಪರೀಕ್ಷೆಯಲ್ಲಿ ಅನರ್ಹರಾದ ಅಭ್ಯರ್ಥಿಗಳನ್ನು ಮುಂದಿನ ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗುವುದು.

*(iii) ಯಾವುದೇ ಹಂತದಲ್ಲಿ ದೈಹಿಕ ತಾಳ್ಮಿಕೆ/ ದೈಹಿಕ ಸಾಮರ್ಥ್ಯ ಪರೀಕ್ಷೆಯಲ್ಲಿ ಅನರ್ಹರಾದಲ್ಲಿ **ಅಥವಾ** ಪರೀಕ್ಷೆ ನಡೆಯುವ ಸಮಯದಲ್ಲಿ ಗಾಯಗೊಂಡಲ್ಲಿ **ಅಥವಾ** ಯಾವುದೇ ಕಾರಣದಿಂದಾಗಿ ಪರೀಕ್ಷೆಯನ್ನು ಅಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಇನ್ನೊಂದು ಅವಕಾಶವನ್ನು ನೀಡಲಾಗುವುದಿಲ್ಲ.*

*(iv) ಮಹಿಳಾ ಅಭ್ಯರ್ಥಿಗಳು 12 ವಾರಗಳ ಮೇಲ್ಪಟ್ಟ ಗರ್ಭಿಣಿ ಅಥವಾ 6 ವಾರಗಳ ಕಡಿಮೆ ಬಾಣಂತಿ ಸ್ತ್ರೀಯರಾಗಿದ್ದಲ್ಲಿ ಅಂತಹ ಅಭ್ಯರ್ಥಿಗಳ ಆರೋಗ್ಯದ ಹಿತದೃಷ್ಟಿಯಿಂದ ದೈಹಿಕ ತಾಳ್ಮಿಕೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಗಳಲ್ಲಿ ಪಾಲ್ಗೊಳ್ಳಲು ತಾತ್ಕಾಲಿಕವಾಗಿ ಅವಕಾಶವಿರುವುದಿಲ್ಲ. **ಅಂತಹ ಅಭ್ಯರ್ಥಿಗಳು ಈ ಪರೀಕ್ಷೆಗಳ ಸಮಯದಲ್ಲಿ ಅಥವಾ ಮುಂಚಿತವಾಗಿ ಆಯ್ಕೆ ಪ್ರಾಧಿಕಾರಕ್ಕೆ ಈ ಕುರಿತು ವೈದ್ಯಕೀಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸದೇ ಇರುವ ಅಭ್ಯರ್ಥಿಗಳನ್ನು ನೇಮಕಾತಿ ಪ್ರಕ್ರಿಯೆಯಿಂದ ಕೈಬಿಡಲಾಗುವುದು.** ಆಯ್ಕೆ ಪ್ರಾಧಿಕಾರ/ ನೇಮಕಾತಿ ಪ್ರಾಧಿಕಾರದ ಗಮನಕ್ಕೆ ತರದೆ ಅಂತಹ ಅಭ್ಯರ್ಥಿಗಳು ದೈಹಿಕ ತಾಳ್ಮಿಕೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಗಳಲ್ಲಿ ಪಾಲ್ಗೊಂಡಲ್ಲಿ, ಸಂಭವಿಸಬಹುದಾದ ಯಾವುದೇ ಅವಘಡಗಳಿಗೆ ಅಂತಹ ಅಭ್ಯರ್ಥಿಗಳೇ ಪೂರ್ಣ ಜವಾಬ್ದಾರರಾಗಿರುತ್ತಾರೆ.*

(v) ಈ ಮೇಲಿನಂತೆ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸಿ/ಹಾಜರುಪಡಿಸಿ, ದೈಹಿಕ ತಾಳ್ಮಿಕೆ/ ದೈಹಿಕ ಸಾಮರ್ಥ್ಯ ಪರೀಕ್ಷೆಗಳಿಗೆ **ಆಯ್ಕೆ ಪ್ರಾಧಿಕಾರದಿಂದ ಲಿಖಿತ ವಿನಾಯಿತಿ ಪಡೆದ** ಮಹಿಳಾ ಅಭ್ಯರ್ಥಿಗಳು ವೈದ್ಯಕೀಯ ಸಕ್ಷಮ ಪ್ರಾಧಿಕಾರವಾದ ಜಿಲ್ಲಾ ಶಸ್ತ್ರಚಿಕಿತ್ಸಕರು/ ಜಿಲ್ಲಾ ಸರ್ಕಾರಿ ವೈದ್ಯರಿಂದ **ಈ ವಿಶೇಷ ಕಾರಣದಿಂದ ವಿನಾಯಿತಿ ಪಡೆದು, ದೈಹಿಕವಾಗಿ ಅರ್ಹರಿರುವುದಾಗಿ** ವೈದ್ಯಕೀಯ ಪ್ರಮಾಣ ಪತ್ರವನ್ನು ಪಡೆದು, ಆಯ್ಕೆ ಪ್ರಾಧಿಕಾರಕ್ಕೆ ಸಲ್ಲಿಸಿದಲ್ಲಿ ದೈಹಿಕ ತಾಳ್ಮಿಕೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಗಳಿಗೆ ಭಾಗವಹಿಸಲು **ಒಂದುಬಾರಿ ಮಾತ್ರ** ಅವಕಾಶ ನೀಡಲಾಗುವುದು. **ಇಂತಹ ಪ್ರಕರಣಗಳಲ್ಲಿ ಮಹಿಳಾ ಅಭ್ಯರ್ಥಿಗಳು ಆಯ್ಕೆ ಪ್ರಾಧಿಕಾರವು ಪುನರ್ ನಿಗದಿಪಡಿಸಿದ ದಿನಾಂಕದಂದು ದೈಹಿಕ ಪರೀಕ್ಷೆಗಳಿಗೆ ಕಡ್ಡಾಯವಾಗಿ ಹಾಜರಾಗಿ, ಭಾಗವಹಿಸುವುದು. ತಪ್ಪಿದಲ್ಲಿ, ಈ ಪರೀಕ್ಷೆಗಳಿಗೆ ಯಾವುದೇ ಕಾರಣಕ್ಕೂ ಮತ್ತೊಮ್ಮೆ ಅವಕಾಶವನ್ನು ನೀಡಲಾಗುವುದಿಲ್ಲ ಹಾಗೂ ಇಂತಹ ಅಭ್ಯರ್ಥಿಗಳನ್ನು ನೇಮಕಾತಿ ಪ್ರಕ್ರಿಯೆಯಿಂದ ಕೈಬಿಡಲಾಗುವುದು.**

(vi) ಅಧಿಸೂಚನೆಯಲ್ಲಿ **ಅಧಿಸೂಚಿಸಿದ ವೃತ್ತ/ ವಿಭಾಗಗಳಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ / ಆಯ್ಕೆ ಪ್ರಾಧಿಕಾರವು ಯಾವುದೇ ಪರೀಕ್ಷಾ ಕೇಂದ್ರವನ್ನು ರದ್ದುಪಡಿಸುವ ಅಥವಾ ಹೊಸದಾಗಿ ಸೇರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.** ಇದನ್ನು ಕರ್ನಾಟಕ ಅರಣ್ಯ ಇಲಾಖೆಯ ಅಧಿಕೃತ ಜಾಲತಾಣ: **https://aranya.gov.in/**ನಲ್ಲಿ ಮುಖ ಪುಟದಲ್ಲಿ **"ನೇಮಕಾತಿ"** ಶೀರ್ಷಿಕೆ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ **https://cetonline.karnataka.gov.in/kea/** ನ ಮೂಲಕ ಪ್ರಕಟಪಡಿಸಲಾಗುವುದು. ಇಲಾಖೆಯು ನಡೆಸುವ ದೈಹಿಕ ಪರೀಕ್ಷೆಗಳ ಫಲಿತಾಂಶವನ್ನು ಆಯ್ಕೆ ಪ್ರಾಧಿಕಾರವು ದೈಹಿಕ ಪರೀಕ್ಷೆಗಳು ಪೂರ್ಣಗೊಂಡ ನಂತರ ಆಯಾ ಪರೀಕ್ಷಾ ಕೇಂದ್ರಗಳಲ್ಲಿ ಅದೇ ದಿನ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಪಡಿಸಲಾಗುವುದು.

(vii) ದೈಹಿಕ ತಾಳ್ಮಿಕೆ/ ದೈಹಿಕ ಸಾಮರ್ಥ್ಯ ಪರೀಕ್ಷೆ ಪೂರ್ಣಗೊಂಡ ನಂತರ ಅಭ್ಯರ್ಥಿಗಳು ಸಮಿತಿ/ಆಯ್ಕೆ ಪ್ರಾಧಿಕಾರದ ಸಮಕ್ಷಮದಲ್ಲಿ ನಿಗದಿತ ನಮೂನೆಗೆ ಸಹಿ ಮತ್ತು ಎಡಗೈ ಹೆಬ್ಬೆಟ್ಟಿನ ಗುರುತು ಹಾಕುವುದು. ಇಲ್ಲವಾದಲ್ಲಿ, ಅಂತಹ ಅಭ್ಯರ್ಥಿಯನ್ನು ಅನರ್ಹರೆಂದು ಪರಿಗಣಿಸಲಾಗುವುದು.

(viii) ವೈದ್ಯಕೀಯ ಪರೀಕ್ಷೆಯಲ್ಲಿ ಅಭ್ಯರ್ಥಿಯು ಅನರ್ಹಗೊಂಡರೆ, ಅವರು ವೈದ್ಯಕೀಯ ಪರೀಕ್ಷೆ ನಡೆದ ಒಂದು ವಾರದೊಳಗೆ ನೇಮಕಾತಿ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಬಹುದು. ಆಯ್ಕೆ ಪ್ರಾಧಿಕಾರವು, ಮೇಲ್ಮನವಿಯ ಸಂಬಂಧ ವೈದ್ಯಕೀಯ ಮಂಡಳಿಯ (Appellate Medical Board) ಮುಂದೆ ಅಭ್ಯರ್ಥಿಯನ್ನು ಹಾಜರುಪಡಿಸಲಾಗುತ್ತದೆ ಮತ್ತು ವೈದ್ಯಕೀಯ ಮಂಡಳಿಯ ನಿರ್ಧಾರವೇ ಅಂತಿಮವಾಗಿರುತ್ತದೆ.

(ix) ಪಾರದರ್ಶಕತೆಗಾಗಿ ಮೇಲೆ ಹೇಳಿದ ಎಲ್ಲಾ ದೈಹಿಕ ತಾಳ್ಮಿಕೆ/ ದೈಹಿಕ ಸಾಮರ್ಥ್ಯ ಪರೀಕ್ಷೆಗಳನ್ನು ವಿಡಿಯೋಗ್ರಫಿ ಅಥವಾ CCTV Camera ಗಳಲ್ಲಿ ಸೆರೆಹಿಡಿಯಲಾಗುವುದು.

(x) ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಾವಳಿಗಳು 2021 ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: FEE 203 FEG 2015 ದಿನಾಂಕ: 06.08.2019ರ ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 2019ರನ್ವಯ ಶಾರೀರಿಕ ಮಾನದಂಡಗಳ ಪರೀಕ್ಷೆ, ದೈಹಿಕ ತಾಳ್ಮಿಕೆ ಪರೀಕ್ಷೆ ಮತ್ತು ದೈಹಿಕ ಸಮರ್ಥತೆ ಪರೀಕ್ಷೆಗಳನ್ನು ಪೂರ್ಣಗೊಳಿಸದ ಹೊರತು ಅಂತಹ ಅಭ್ಯರ್ಥಿಯು ನೇಮಕಾತಿಗೆ ಅರ್ಹನಾಗಿರತಕ್ಕದ್ದಲ್ಲ.

10. ಲಿಖಿತ ಪರೀಕ್ಷಾ ವಿಧಾನ:

a) **ಪ್ರಶ್ನೆಪತ್ರಿಕೆ ಹಾಗೂ ಪಠ್ಯಕ್ರಮ:**

(i) ಇಲಾಖೆಯು ನಡೆಸುವ ಶಾರೀರಿಕ ಮಾನದಂಡಗಳ ಪರೀಕ್ಷೆ [Physical Standard Test], ದೈಹಿಕ ತಾಳ್ಮಿಕೆ ಪರೀಕ್ಷೆ [Physical Endurance Test] ಮತ್ತು ದೈಹಿಕ ಕಾರ್ಯ

ಸಾಮರ್ಥ್ಯ [Physical Efficiency Test] ಪರೀಕ್ಷೆಗಳಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ಮಾತ್ರ ಅಧಿಸೂಚಿಸಿದ ವೃತ್ತಗಳಲ್ಲಿ ಏಕ ಕಾಲದಲ್ಲಿ ಆಪ್ಟಿಟ್ಯೂಡ್ ಪರೀಕ್ಷೆ (Objective Type) ಯನ್ನು ನಡೆಸಲಾಗುವುದು.

(ii) ಆಪ್ಟಿಟ್ಯೂಡ್ ಪರೀಕ್ಷೆ (Objective Type) ಕರ್ನಾಟಕ ಪದವಿ ಪೂರ್ವ ಶಿಕ್ಷಣ ಮಂಡಳಿಯು ನಡೆಸುವ ಪಿ.ಯು.ಸಿ. ವಿದ್ಯಾರ್ಹತೆ ಅಥವಾ ಪಿ.ಯು.ಸಿ. ವಿದ್ಯಾರ್ಹತೆಯ ತತ್ಸಮಾನ ವಿದ್ಯಾರ್ಹತೆಯ ಮಾನದಂಡಗಳಂತೆ ನಡೆಸಲಾಗುವುದು.

(iii) ಅರಣ್ಯ ಇಲಾಖೆಯ ನೇರ ನೇಮಕಾತಿ ಅಧಿಸೂಚನೆಯಲ್ಲಿ ಅಧಿಸೂಚಿಸಿದ ಎಲ್ಲಾ ಹದಿಮೂರು ವೃತ್ತಗಳ (13) ಗಳಿಗೆ ಸಂಬಂಧಿಸಿದಂತೆ, (i) ಬೆಂಗಳೂರು (ii) ಬಳ್ಳಾರಿ (iii) ಧಾರವಾಡ (iv) ಕಲಬುರಗಿ (v) ಹಾಸನ (vi) ಮಂಗಳೂರು (vii) ಮೈಸೂರು ಮತ್ತು (viii) ಶಿವಮೊಗ್ಗ ಪರೀಕ್ಷಾ ಕೇಂದ್ರಗಳಲ್ಲಿ ಮಾತ್ರ ಲಿಖಿತ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ನಡೆಸಲಾಗುವುದು. ಲಿಖಿತ ಪರೀಕ್ಷೆಯನ್ನು ಅರಣ್ಯ ಇಲಾಖೆಯ ಎಂಟು ವೃತ್ತಗಳ ಕೇಂದ್ರಸ್ಥಾನಗಳಲ್ಲಿ ಏಕಕಾಲದಲ್ಲಿ ನಡೆಸಲಾಗುವುದು.

[ಆಡಳಿತಾತ್ಮಕ ಉದ್ದೇಶದಿಂದ ವೃತ್ತಗಳ ಪರೀಕ್ಷಾ ಕೇಂದ್ರಗಳ ಬದಲಾವಣೆಯ ಪರತ್ತಿಗೆ ಒಳಪಟ್ಟಿರುತ್ತದೆ.]

(iv) ಅಭ್ಯರ್ಥಿಗಳಿಗೆ ಪರೀಕ್ಷೆಯ ಪ್ರವೇಶ ಪತ್ರಗಳನ್ನು ಪರೀಕ್ಷಾ ಪ್ರಾಧಿಕಾರದ ಜಾಲತಾಣದಿಂದ ಡೌನ್‌ಲೋಡ್ ಮಾಡಿಕೊಳ್ಳಲು ಪ್ರಕಟಣೆಯ ಮೂಲಕ *ಕರ್ನಾಟಕ ಅರಣ್ಯ ಇಲಾಖೆಯ ಅಧಿಕೃತ ಜಾಲತಾಣ:* ***https://aranya.gov.in/****ನಲ್ಲಿ ಮುಖ ಪುಟದ* ***"ನೇಮಕಾತಿ"*** *ಶೀರ್ಷಿಕೆಯಲ್ಲಿ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್* ***https://cetonline.karnataka.gov.in/kea/*** *ನ ಮೂಲಕ ಪ್ರಕಟಪಡಿಸಲಾಗುವುದು.* ಅಭ್ಯರ್ಥಿಗಳು ಕಡ್ಡಾಯವಾಗಿ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡು ಒಂದು ಮೂಲ ಗುರುತಿನ ಚೀಟಿಯೊಂದಿಗೆ (ಪ್ಯಾನ್ ಕಾರ್ಡ್ / ವಾಹನ ಚಾಲನಾ ಪರವಾನಗಿ / ಆಧಾರ್ ಕಾರ್ಡ್ / ಪಾಸ್‌ಪೋರ್ಟ್ / ವೋಟರ್ ಐಡಿ) ಪರೀಕ್ಷಾ ಕೇಂದ್ರಗಳಿಗೆ ನಿಗದಿತ ಸಮಯದಲ್ಲಿ ಹಾಜರಾಗುವುದು. ತಪ್ಪಿದಲ್ಲಿ ಪರೀಕ್ಷಾ ಕೇಂದ್ರವನ್ನು ಪ್ರವೇಶಿಸಲು ಅನುಮತಿಸಲಾಗುವುದಿಲ್ಲ.

(v) ಲಿಖಿತ ಪರೀಕ್ಷೆಯನ್ನು **ಆಫ್‌ಲೈನ್- ಒಎಂಆರ್ (Offline-OMR type)** ಮಾದರಿಯಲ್ಲಿ ನಡೆಸಲಾಗುವುದು.

(vi) ಆಪ್ಟಿಟ್ಯೂಡ್ ಪರೀಕ್ಷೆ (Objective Type) ಯ ವಿವರ:

ಪತ್ರಿಕೆ/Paper	ವಿಷಯ/ Subject	ಒಟ್ಟು ಪ್ರಶ್ನೆಗಳು/Total Qustions	ಒಟ್ಟು ಅಂಕಗಳು/Total Marks	ಅವಧಿ/ Duration (ಗಂಟೆ/hours)
ಲಿಖಿತ ಪರೀಕ್ಷೆ	ಸಾಮಾನ್ಯ ಜ್ಞಾನ [General Knowledge] & ಗಣಿತ [Mathematics]	100	100	2.00

b) **ಪಠ್ಯಕ್ರಮ:**

(i) ಗಣಿತ [Mathematics] 40 ಅಂಕಗಳು	ಪಿ.ಯು.ಸಿ. ವಿದ್ಯಾರ್ಹತೆ ಅಥವಾ ಪಿ.ಯು.ಸಿ. ವಿದ್ಯಾರ್ಹತೆಯ ತತ್ಸಮಾನ ವಿದ್ಯಾರ್ಹತೆಯ ಮಟ್ಟದಲ್ಲಿ *[II PUC or equivalent level]*
(ii) ಸಾಮಾನ್ಯ ಜ್ಞಾನ [General Knowledge] 60 ಅಂಕಗಳು	ಭಾರತದ ಪ್ರಾಚೀನ ನಾಗರಿಕತೆಗಳು *[Indian Civilization]*, ಇತಿಹಾಸ *[History]*, ಭಾರತದ ಸ್ವಾತಂತ್ರ್ಯ ಹೋರಾಟ *[Indian Independence Movement]*, ಭಾರತದ ರಾಜನೀತಿ *[Indian Polity]*, ಭಾರತದ ಅರ್ಥನೀತಿ *[Indian*

[ಪಿ.ಯು.ಸಿ. ವಿದ್ಯಾರ್ಹತೆ ಅಥವಾ ಪಿ.ಯು.ಸಿ. ವಿದ್ಯಾರ್ಹತೆಯ ತತ್ಸಮಾನ ವಿದ್ಯಾರ್ಹತೆಯ ಮಟ್ಟದಲ್ಲಿ (II PUC or equivalent level)]	Economy], ಭೂಗೋಳ ಮತ್ತು ನೈಸರ್ಗಿಕ ಸಂಪನ್ಮೂಲಗಳು [Geography & Natural Resources], ವಿಜ್ಞಾನ ಮತ್ತು ತಂತ್ರಜ್ಞಾನ [Science & Technology], ಕಲೆ ಮತ್ತು ಸಂಸ್ಕೃತಿ [Art & Culture], ಮೂಲಭೂತ ಸೌಕರ್ಯಗಳ ಅಭಿವೃದ್ಧಿ [Infrastructural Development], ಪ್ರಚಲಿತ ವಿದ್ಯಮಾನಗಳು [Current Affairs] ಹಾಗೂ ಕ್ರೀಡೆ [Sports]

ವಿಶೇಷ ಸೂಚನೆ:

(i) ಪ್ರಶ್ನೆ ಪತ್ರಿಕೆಯು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಮಾತ್ರ ಇರುತ್ತದೆ.

(ii) ಪ್ರಶ್ನೆ ಪತ್ರಿಕೆ ಹಾಗೂ ಅಂಕಗಳ ಸ್ವರೂಪ: -

a. ಪ್ರಶ್ನೆ ಪತ್ರಿಕೆಯು ಒಟ್ಟು 100 ವಸ್ತುನಿಷ್ಠ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

b. ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಆಯ್ಕೆಯ ಉತ್ತರಗಳನ್ನು ನೀಡಲಾಗಿದ್ದು, ಅವುಗಳ ಪೈಕಿ ಒಂದು ಮಾತ್ರ ಸರಿ ಮತ್ತು ಸಂಪೂರ್ಣ ಉತ್ತರ (Correct and complete answer) ವಾಗಿರುತ್ತದೆ.

c. ಪ್ರತಿಯೊಂದು ಪ್ರಶ್ನೆಗೆ ಒಂದೇ ಉತ್ತರ, ಅಲ್ಲದೆ ಸರಿಯಾದ ಮತ್ತು ಸಂಪೂರ್ಣ ಉತ್ತರ (Correct and complete answer) ನೀಡಿದಲ್ಲಿ ಒಂದು ಅಂಕ ನೀಡಲಾಗುವುದು.

d. ತಪ್ಪು ಉತ್ತರ ನೀಡಿದಲ್ಲಿ ಆ ಪ್ರಶ್ನೆಗೆ (-) 0.25 ಋಣಾತ್ಮಕ ಅಂಕ (negative mark) ನೀಡಲಾಗುವುದು.

e. ಪ್ರಶ್ನೆಗೆ ಒಂದಕ್ಕಿಂತ ಹೆಚ್ಚಿನ ಉತ್ತರಗಳನ್ನು ನೀಡಿದಲ್ಲಿ ಅಥವಾ ಪ್ರಶ್ನೆಗೆ ಯಾವುದೇ ಉತ್ತರ ನೀಡದಿದ್ದಲ್ಲಿ (-) 0.25 ಋಣಾತ್ಮಕ (negative mark) ಅಂಕವನ್ನು ನೀಡಲಾಗುವುದು.

f. ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ 5ನೇ ಆಯ್ಕೆ/ ವೃತ್ತವನ್ನು ನೀಡಿದ್ದು, ಉತ್ತರಿಸದೇ ಇರುವ ಪ್ರಶ್ನೆಗಳಿಗೆ 5ನೇ ಆಯ್ಕೆ/ ವೃತ್ತವನ್ನು ಶೇಡ್ ಮಾಡಲು ಕೊನೆಯ ಬೆಲ್ ಆದ ನಂತರ ಹೆಚ್ಚುವರಿಯಾಗಿ 5 ನಿಮಿಷಗಳನ್ನು ನೀಡಲಾಗುವುದು. ಯಾವುದೇ ಆಯ್ಕೆಯನ್ನು/ವೃತ್ತವನ್ನು ಶೇಡ್ ಮಾಡಿಲ್ಲದಿದ್ದರೆ, ಪ್ರತಿ ಪ್ರಶ್ನೆಗೆ 0.25 ಅಂಕಗಳನ್ನು ಕಡಿತಗೊಳಿಸಲಾಗುತ್ತದೆ.

(iii) ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನಡೆಸುವ ಲಿಖಿತ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು. ಯಾವುದೇ ಕಾರಣಕ್ಕೂ ಗೈರುಹಾಜರಾದ ಅಭ್ಯರ್ಥಿಗಳನ್ನು ಮುಂದಿನ ಆಯ್ಕೆ ಪ್ರಕ್ರಿಯೆಗೆ ಪರಿಗಣಿಸಲಾಗುವುದಿಲ್ಲ. ***ಅಭ್ಯರ್ಥಿಗಳು OMR ಉತ್ತರ ಪತ್ರಿಕೆಯಲ್ಲಿ ರಿಜಿಸ್ಟ್ರೇಷನ್ ಸಂಖ್ಯೆ, ಪ್ರಶ್ನೆ ಪತ್ರಿಕೆಯ ಸಂಖ್ಯೆ ಹಾಗೂ ವರ್ಷನ್ ಕೋಡ್ ಬರೆಯದಿದ್ದಲ್ಲಿ, ಸಹಿ ಮಾಡದಿದ್ದಲ್ಲಿ ಅಂತಹ ಉತ್ತರ ಪತ್ರಿಕೆ (OMR Sheet) ಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.***

11. ಮೆರಿಟ್ ಪಟ್ಟಿ:

ಅಭ್ಯರ್ಥಿಗಳು ಕರ್ನಾಟಕ ಪದವಿ ಪೂರ್ವ ಶಿಕ್ಷಣ ಮಂಡಳಿಯು ನಡೆಸುವ ಪಿ.ಯು.ಸಿ. ವಿದ್ಯಾರ್ಹತೆ **ಅಥವಾ** ಪಿ.ಯು.ಸಿ. ವಿದ್ಯಾರ್ಹತೆಯ ತತ್ಸಮಾನ ವಿದ್ಯಾರ್ಹತೆಯಲ್ಲಿ ಗಳಿಸಿದ ಒಟ್ಟು ಅಂಕಗಳಲ್ಲಿ ಶೇಕಡ 50ರಷ್ಟು **ಹಾಗೂ** ಆಪ್ಟಿಟ್ಯೂಡ್ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳ ಶೇಕಡ 50ರಷ್ಟು ಒಟ್ಟುಗೂಡಿಸಿ, ಒಟ್ಟು ಅಂಕಗಳ ಆಧಾರದ ಮೇಲೆ ಅಭ್ಯರ್ಥಿಗಳ ವೃತ್ತ ಮಟ್ಟದ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಲಾಗುವುದು. ಸದರಿ ಪಟ್ಟಿಯಲ್ಲಿ ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಪಡೆದ ಒಟ್ಟು ಅಂಕಗಳು ಸಮಾನವಾಗಿದ್ದರೆ, ವಯಸ್ಸಿನಲ್ಲಿ ಹಿರಿಯರನ್ನು ಕಿರಿಯರಿಗಿಂತ ಮೇಲಕ್ಕೆ ಇರಿಸಿ, ಮೆರಿಟ್ ನಿರ್ಧರಿಸಲಾಗುವುದು.

12. ತಾತ್ಕಾಲಿಕ ಆಯ್ಕೆ ಪಟ್ಟಿ:

ಅಭ್ಯರ್ಥಿಗಳು ಕರ್ನಾಟಕ ಪದವಿ ಪೂರ್ವ ಶಿಕ್ಷಣ ಮಂಡಳಿಯು ನಡೆಸುವ ಪಿ.ಯು.ಸಿ. ವಿದ್ಯಾರ್ಹತೆ **ಅಥವಾ** ಪಿ.ಯು.ಸಿ. ವಿದ್ಯಾರ್ಹತೆಯ ತತ್ಸಮಾನ ವಿದ್ಯಾರ್ಹತೆಯಲ್ಲಿ ಗಳಿಸಿದ ಒಟ್ಟು ಅಂಕಗಳಲ್ಲಿ ಶೇಕಡ 50ರಷ್ಟು ಹಾಗೂ ಆಪ್ಟಿಟ್ಯೂಡ್ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳ ಶೇಕಡ 50ರಷ್ಟು ಒಟ್ಟುಗೂಡಿಸಿ, ಒಟ್ಟು ಅಂಕಗಳ ಆಧಾರದ ಮೇಲೆ ಮತ್ತು ಪ್ರಚಲಿತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮ ಹಾಗೂ ನೇರ ಮತ್ತು ಸಮತಳ ಮೀಸಲಾತಿ ನಿಯಮಗಳನುಸಾರ ಈ ಅಧಿಸೂಚನೆಯಲ್ಲಿ ಅಧಿಸೂಚಿಸಿರುವ ಪ್ರವರ್ಗವಾರು ಖಾಲಿ

ಹುದ್ದೆಗಳಿಗೆ 1:1 (ಹುದ್ದೆ:ಅಭ್ಯರ್ಥಿ) ಅನುಪಾತದಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಿ ಕರ್ನಾಟಕ ಅರಣ್ಯ ಇಲಾಖೆಯ ಅಧಿಕೃತ ಜಾಲತಾಣ **https://aranya.gov.in/** ಮುಖ ಪುಟದಲ್ಲಿ ಇರುವ **"ನೇಮಕಾತಿ"** ಶೀರ್ಷಿಕೆಯಡಿ ಪ್ರಕಟಪಡಿಸಲಾಗುವುದು.

13. ಮೂಲ ದಾಖಲೆಗಳ ಪರಿಶೀಲನೆ:

13.1. ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳು ಆನ್‌ಲೈನ್ (Online) ಅರ್ಜಿಯಲ್ಲಿ ಭರ್ತಿ ಮಾಡಿರುವ ಮಾಹಿತಿ/ವಿವರಗಳ ಆಧಾರದನ್ವಯ ಮೂಲ ದಾಖಲೆ/ಪ್ರಮಾಣ ಪತ್ರಗಳ ಪರಿಶೀಲನೆಗೆ ಸೂಚಿತ ದಿನಾಂಕದಂದು ಹಾಜರಾಗಲು ಆಯ್ಕೆ ಪ್ರಾಧಿಕಾರದ ವತಿಯಿಂದ ಕರ್ನಾಟಕ ಅರಣ್ಯ ಇಲಾಖೆಯ ಅಧಿಕೃತ ಜಾಲತಾಣ **https://aranya.gov.in/** ಮುಖ ಪುಟದಲ್ಲಿ ಇರುವ **"ನೇಮಕಾತಿ"** ಶೀರ್ಷಿಕೆಯಡಿ ಪ್ರಕಟಿಸಲಾಗುವುದು. ಸೂಚಿತ ದಿನಾಂಕದಂದು ಮೂಲ ದಾಖಲೆ/ಪ್ರಮಾಣ ಪತ್ರಗಳ ಪರಿಶೀಲನೆಗೆ ಆಯ್ಕೆ ಪ್ರಾಧಿಕಾರದ ಸಮಕ್ಷಮ ಕಡ್ಡಾಯವಾಗಿ ಹಾಜರಾಗುವುದು.

13.2. ಅಭ್ಯರ್ಥಿಗಳು ಆನ್‌ಲೈನ್ (Online) (ಎಲೆಕ್ಟ್ರಾನಿಕ್ ಮಾರ್ಗ) ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನಮೂದಿಸಿರುವ / ಪಡೆದುಕೊಂಡಿದ್ದ ಎಲ್ಲಾ ದಾಖಲೆ/ಪ್ರಮಾಣ ಪತ್ರಗಳನ್ನು ಮೂಲ **ದಾಖಲಾತಿಗಳ** ಪರಿಶೀಲನಾ ವೇಳೆ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು. **ಮೂಲ ದಾಖಲೆ/ಪ್ರಮಾಣ ಪತ್ರಗಳ ಪರಿಶೀಲನೆಯಲ್ಲಿ ಯಾವುದೇ ರೀತಿಯ ಗೊಂದಲ/ವ್ಯತಿರಿಕ್ತ ದಾಖಲೆ/ಪ್ರಮಾಣ ಪತ್ರಗಳನ್ನು ಸಲ್ಲಿಸಿದ್ದಲ್ಲಿ ಅಂತಹ ದಾಖಲೆ/ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅರ್ಜಿಯಲ್ಲಿ ನಮೂದಿಸಿರುವ ದಾಖಲಾತಿಗಳನ್ನು ನಿಗದಿತ ದಿನಾಂಕದಂದು ಸಲ್ಲಿಸಲು ವಿಫಲರಾದಲ್ಲಿ/ಗೈರು ಹಾಜರಾದಲ್ಲಿ ಅಂತಹ ಅಭ್ಯರ್ಥಿಯ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು ಹಾಗೂ ಮುಂದಿನ ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗುವುದು.**

13.3. ಅಭ್ಯರ್ಥಿಯು **ಆನ್‌ಲೈನ್ ಅರ್ಜಿ ಸಲ್ಲಿಸುವಾಗ ನಮೂದಿಸಿರುವ ಪ್ರಮಾಣ ಪತ್ರಗಳನ್ನೇ ಮೂಲ ದಾಖಲಾತಿಗಳ ಪರಿಶೀಲನೆ ವೇಳೆಯಲ್ಲಿ ಹಾಜರುಪಡಿಸುವುದು** ಹಾಗೂ ಎಲ್ಲಾ ಸಂದರ್ಭದಲ್ಲಿಯೂ **ಒಂದೇ ತರಹದ ದಾಖಲಾತಿ/ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು,** ಈ ಬಗ್ಗೆ ಅಭ್ಯರ್ಥಿಗಳು ಬಹಳ ಎಚ್ಚರಿಕೆ ವಹಿಸುವುದು.

14. ಅಂತಿಮ ಆಯ್ಕೆ ಪಟ್ಟಿ:

ವೃತ್ತ ಮಟ್ಟದಲ್ಲಿ ಅಧಿಸೂಚಿಸಲಾದ ಖಾಲಿ ಹುದ್ದೆಗಳ ಸಂಖ್ಯೆಗೆ ಸಮಾನವಾದ 1:1 (ಹುದ್ದೆ:ಅಭ್ಯರ್ಥಿ) ಅನುಪಾತದಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳು ಮೂಲ ದಾಖಲೆ/ಪ್ರಮಾಣ ಪತ್ರಗಳ ಪರಿಶೀಲನೆಯಲ್ಲಿ ಅರ್ಹತೆ ಪಡೆದ ನಂತರ, ಕರ್ನಾಟಕ ಪದವಿ ಪೂರ್ವ ಶಿಕ್ಷಣ ಮಂಡಳಿಯು ನಡೆಸುವ ಪಿ.ಯು.ಸಿ. ವಿದ್ಯಾರ್ಹತೆ ಅಥವಾ ಪಿ.ಯು.ಸಿ. ವಿದ್ಯಾರ್ಹತೆಯ ತತ್ಸಮಾನ ವಿದ್ಯಾರ್ಹತೆಯಲ್ಲಿ ಗಳಿಸಿದ ಒಟ್ಟು ಅಂಕಗಳಲ್ಲಿ ಶೇಕಡ 50ರಷ್ಟು ಹಾಗೂ ಆಪ್ಟಿಟ್ಯೂಡ್ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳ ಶೇಕಡ 50ರಷ್ಟು ಒಟ್ಟುಗೂಡಿಸಿ, ಒಟ್ಟು ಅಂಕಗಳ ಆಧಾರದ ಮೇಲೆ ಮತ್ತು ಪ್ರಚಲಿತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮ ಹಾಗೂ ಮೀಸಲಾತಿ ನಿಯಮಗಳನುಸಾರ ಅಧಿಸೂಚನೆಯಲ್ಲಿ ಅಧಿಸೂಚಿಸಿರುವ ಪ್ರವರ್ಗವಾರು ಖಾಲಿ ಹುದ್ದೆಗಳಿಗೆ 1:1 (ಹುದ್ದೆ:ಅಭ್ಯರ್ಥಿ) ಅನುಪಾತದಲ್ಲಿ ಅಭ್ಯರ್ಥಿಗಳನ್ನು ಗಸ್ತು ಅರಣ್ಯ ಪಾಲಕ (ವೃಂದ ಮತ್ತು ನೇಮಕಾತಿ ನಿಯಮಗಳಂತೆ 'ಅರಣ್ಯ ರಕ್ಷಕ') ವೃಂದದ ಹುದ್ದೆಗೆ ಅಂತಿಮವಾಗಿ ಆಯ್ಕೆ ಮಾಡಿ, ಅಂತಿಮ ಆಯ್ಕೆ ಪಟ್ಟಿಯನ್ನು ಕರ್ನಾಟಕ ಅರಣ್ಯ ಇಲಾಖೆಯ ಅಧಿಕೃತ ಜಾಲತಾಣ https://aranya.gov.in/ ಮುಖ ಪುಟದಲ್ಲಿ ಇರುವ "ನೇಮಕಾತಿ" ಶೀರ್ಷಿಕೆಯಡಿ ಪ್ರಕಟಪಡಿಸಲಾಗುವುದು.

15. ವಿವಿಧ ಪ್ರವರ್ಗಗಳಡಿ ಮೀಸಲಾತಿ ಕೋರುವ ಅಭ್ಯರ್ಥಿಗಳು ಸಲ್ಲಿಸಬೇಕಾದ ದಾಖಲೆ/ಪ್ರಮಾಣ ಪತ್ರಗಳ ವಿವರ ಈ ಕೆಳಕಂಡಂತಿದೆ:

[ಟಿಪ್ಪಣಿ: ಸಕ್ಷಮ ಪ್ರಾಧಿಕಾರವು ನಿಗದಿತ ನಮೂನೆಯಲ್ಲಿ ಜಾರಿಗೊಳಿಸಿದ ಈ ಕೆಳಗಿನ ಪ್ರಮಾಣ ಪತ್ರಗಳನ್ನು ಅಭ್ಯರ್ಥಿಯು ನೇರ ನೇಮಕಾತಿಯ ಅಧಿಸೂಚನೆಯ ಆನ್‌ಲೈನ್ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಚಾಲ್ತಿಯಲ್ಲಿರುವುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು. ಅಭ್ಯರ್ಥಿಯು ಮೀಸಲಾತಿ ಕೋರುವ/ಅನ್ವಯಿಸುವ ನಿಗದಿತ ಅಂಕಣವನ್ನು ಭರ್ತಿ ಮಾಡುವುದು.]

15.1. ಜನ್ಮ ದಿನಾಂಕದ ದೃಢೀಕರಣದ ಕುರಿತು: ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯ ಅಂಕಪಟ್ಟಿ/ ಎಸ್.ಎಸ್.ಎಲ್.ಸಿ. ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ) / ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ (Extract of Cumulative Record) ತೋರಿಸುವ ದಾಖಲೆಗಳನ್ನು ಪರಿಗಣಿಸಲಾಗುವುದು. ಇವುಗಳನ್ನು ಹೊರತುಪಡಿಸಿ ಇತರೆ ಯಾವುದೇ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.

15.2. ಮೀಸಲಾತಿ ಕೋರುವ ಅಭ್ಯರ್ಥಿಗಳು ಈ ಕೆಳಗೆ ನಮೂದಿಸಿರುವ ನಮೂನೆಗಳಲ್ಲಿಯೇ ಮೀಸಲಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರವನ್ನು ಸಂಬಂಧಿತ ತಹಶೀಲ್ದಾರ್ ರವರಿಂದ ಅಂದರೆ ತಹಶೀಲ್ದಾರ್ ರವರ ಸಹಿ ಮತ್ತು ಮೊಹರು ಅಥವಾ ಬಾರ್‌ಕೋಡ್, ಹಾಲೋಗ್ರಾಮ್ ಮತ್ತು ವಾಟರ್ ಮಾರ್ಕ್‌ನೊಂದಿಗೆ (RD ಸಂಖ್ಯೆ ಇರುವ ಪ್ರಮಾಣ ಪತ್ರ ಹೊಂದಿರತಕ್ಕದ್ದು) ಪಡೆದಿಟ್ಟುಕೊಂಡು, ಆನ್‌ಲೈನ್ **ಅರ್ಜಿ ಸಲ್ಲಿಸುವಾಗ ಅಭ್ಯರ್ಥಿಯು ಸರಿಯಾದ RD ಸಂಖ್ಯೆಯನ್ನು ನಮೂದಿಸತಕ್ಕದ್ದು** ಹಾಗೂ ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದಾಗ ಇದೇ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ಒಂದು ವೇಳೆ **ತಪ್ಪಾದ ಅಥವಾ ಬೇರೆ ಅಭ್ಯರ್ಥಿಯ RD ಸಂಖ್ಯೆಯನ್ನು ನಮೂದಿಸಿ, ಅಭ್ಯರ್ಥಿಯು ಅನರ್ಹಗೊಂಡಲ್ಲಿ ಪ್ರಾಧಿಕಾರ / ನೇಮಕಾತಿ ಪ್ರಾಧಿಕಾರ ಜವಾಬ್ದಾರಿಯಾಗುವುದಿಲ್ಲ.**

ಪರಿಶಿಷ್ಟ ಜಾತಿ (RD ಸಂಖ್ಯೆಯುಳ್ಳ ಪ್ರವರ್ಗ ಎ, ಪ್ರವರ್ಗ ಬಿ & ಪ್ರವರ್ಗ ಸಿ) ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು	**ನಮೂನೆ 'ಡಿ'**
ಪ್ರವರ್ಗ – I ಕ್ಕೆ ಸೇರಿದ ಅಭ್ಯರ್ಥಿಗಳು	**ನಮೂನೆ 'ಇ'**
ಪ್ರವರ್ಗ – IIಎ, IIಬಿ, IIIಎ ಮತ್ತು IIIಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು	**ನಮೂನೆ 'ಎಫ್'**

a) ಹಿಂದುಳಿದ ವರ್ಗಗಳ ಪ್ರವರ್ಗ – IIಎ, IIಬಿ, IIIಎ ಮತ್ತು IIIಬಿ ಮೀಸಲಾತಿ ಪ್ರಮಾಣ ಪತ್ರಗಳು 05 ವರ್ಷ ಚಾಲ್ತಿರುತ್ತವೆ (Government Notification No. SWD 155 BCA 2012 Dt: 17.02.2012 ರನ್ವಯ) ಅಭ್ಯರ್ಥಿಗಳು ಪಡೆದಿರುವ ಪ್ರಮಾಣ ಪತ್ರವು ಅರ್ಜಿಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರತಕ್ಕದ್ದು.

b) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ – I ರ ಅಭ್ಯರ್ಥಿಗಳು ಪಡೆದಿರುವ/ ಪಡೆಯುವ ಪ್ರಮಾಣ ಪತ್ರಗಳು ಜೀವಿತಾವಧಿಯವರೆಗೆ ಅಥವಾ ರದ್ದು ಮಾಡುವವರೆಗೆ ಸಿಂಧುತ್ವವನ್ನು ಹೊಂದಿದ್ದು, ಇಂತಹ ಪ್ರಮಾಣ ಪತ್ರಗಳನ್ನು ದಿನಾಂಕದ ಕಾಲ ಮಿತಿಯಿಲ್ಲದೆ ಪರಿಗಣಿಸಲಾಗುವುದು. *[ಸರ್ಕಾರದ ಸುತ್ತೋಲೆ ಸಂಖ್ಯೆ: SWD 155 BCA 2011 Dt. 22.02.2012]*

**** ವಿಶೇಷ ಸೂಚನೆ:***

- *ಅಭ್ಯರ್ಥಿಗಳು ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದಾಗ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ ಅವರ ಅಭ್ಯರ್ಥಿತನವನ್ನು ಸಾಮಾನ್ಯ ಅರ್ಹತೆಯಡಿಯಲ್ಲಿ ಅರ್ಹರಾದಲ್ಲಿ ಮಾತ್ರ ಪರಿಗಣಿಸಲಾಗುವುದು. ಈ ಪ್ರಮಾಣ ಪತ್ರಗಳ ನಮೂನೆಯನ್ನು ಪ್ರತ್ಯೇಕವಾಗಿ ನೀಡಲಾಗಿದೆ. ಈ ನಮೂನೆಗಳನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಗಳಲ್ಲಿ ಪಡೆಯಲಾದ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು.*
- *ಸರ್ಕಾರದ ಆದೇಶ ಸಂಖ್ಯೆ: ಸಕಇ 179 ಬಿಸಿಎ 2010, ದಿನಾಂಕ: 16.07.2011ರನ್ವಯ ಬಲಿಜ ಮತ್ತು ಉಪ ಜಾತಿಗಳಾದ ಬಲಜಿಗ/ ಬಣಜಿಗ/ ಗೌಡಬಣಜಿಗ, ನಾಯ್ಡು, ತೆಲಗ ಬಲಜಿಗ/ ತೆಲಗ ಬಣಜಿಗ/ ಶೆಟ್ಟಿ, ಬಲಿಜ, ಶೆಟ್ಟಿ, ಬಣಜಿಗ/ ಬಣಜಿಗ ಶೆಟ್ಟಿ, ದಾಸರ ಬಲಿಜ / ದಾಸರ ಬಲಜಿಗ/ ದಾಸರ ಬಣಜಿಗ/ ದಾಸ ಬಣಜಿಗ, ಕಸ್ಟನ್, ಮುನ್ನೂರ / ಮುನ್ನಾರ್/ ಮುನ್ನೂಕಾರ್ಪು, ಬಳಿಗಾರ/ ಬಳಿ ಬಣಜಿಗ/ ಬಳಬಲಜಿಗ/ ಬಳಿ ಜೆಟ್ಟಿ,/ ಬಣಗಾರ, ರೆಡ್ಡಿ (ಬಲಿಜ), ಜನಪ್ಪನ್, ಉಪ್ಪಾರ(ಬಲಿಜ), ತುಳೇರು(ಬಲಿಜ) ಉಪ ಜಾತಿಗಳನ್ನು ಶಿಕ್ಷಣದ ಸಲುವಾಗಿ 2ಎ ಮೀಸಲಾತಿಯಡಿ ಹಾಗೂ ಉದ್ಯೋಗದ ಸಲುವಾ 3ಎ ಮೀಸಲಾತಿಯಡಿ ಪರಿಗಣಿಸಲಾಗಿದೆ. **ಆದ್ದರಿಂದ, ಸದರಿ ಆದೇಶದನುಸಾರ ಸದರಿ ಜಾತಿ/ಉಪ***

ಜಾತಿಯ ಅಭ್ಯರ್ಥಿಗಳು ಉದ್ಯೋಗದಲ್ಲಿನ ಮೀಸಲಾತಿಗಾಗಿ ಆನ್‌ಲೈನ್ ಅರ್ಜಿಯಲ್ಲಿ ಕಡ್ಡಾಯವಾಗಿ 3ಎ ಮೀಸಲಾತಿ ಕೋರತಕ್ಕದ್ದು, ಹಾಗೂ ಶಿಕ್ಷಣದ ಸಲುವಾಗಿ ಪಡೆದ 2ಎ ಮೀಸಲಾತಿ ಪ್ರಮಾಣ ಪತ್ರವನ್ನು ಪರಿಗಣಿಸಲಾಗುವುದಿಲ್ಲ.

- **ಇತರೆ ಹಿಂದುಳಿದ ಪ್ರವರ್ಗಗಳಾದ ಪ್ರವರ್ಗ – IIಎ, IIಬಿ, IIIಎ ಮತ್ತು IIIಬಿ ಪ್ರವರ್ಗದಡಿ ಮೀಸಲಾತಿ ಕೋರುವ ವಿವಾಹಿತ ಮಹಿಳಾ ಅಭ್ಯರ್ಥಿಗಳು ಅವರ ಪತಿಯ ಹೆಸರಿನೊಂದಿಗೆ ಜಾರಿಯಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಗೊಳಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡು ಅರ್ಜಿಯಲ್ಲಿ ಮೀಸಲಾತಿ ಕೋರತಕ್ಕದ್ದು.**

15.3. ಮಾಜಿ ಸೈನಿಕರಿಗೆ ಮೀಸಲಾತಿ:

ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು, 1977 ರನ್ವಯ ಮಾಜಿ ಸೈನಿಕರ ವಿವರಣೆ ಕೆಳಕಂಡಂತಿದೆ:

ಮಾಜಿ ಸೈನಿಕ ಎಂದರೆ ಕೇಂದ್ರ ಸಶಸ್ತ್ರ ದಳಗಳಾದ ನಿಯಮಿತ ಭೂದಳ, ನೌಕಾದಳ ಮತ್ತು ವಾಯು ದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಯೋಧನಾಗಿಲ್ಲದೇ) ಸೇವೆ ಸಲ್ಲಿಸಿರುವ ವ್ಯಕ್ತಿ ಎಂದು ಅರ್ಥ. ಅಂದರೆ, ರಕ್ಷಣಾ ಭದ್ರತಾ ದಳ (Defence Security Corps), ಜನರಲ್ ರಿಸರ್ವ್ ಇಂಜಿನಿಯರಿಂಗ್ ಫೋರ್ಸ್ (General Reserved Engineering Force), ಲೋಕ ಸಹಾಯಕ ಸೇನಾ (Lok Sahayak Sena) ಮತ್ತು ಪ್ಯಾರಾ ಮಿಲಿಟರಿ ದಳ (Para Military Forces) ದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಸೇರ್ಪಡೆಯಾಗುವುದಿಲ್ಲ ಮತ್ತು

1. ಮಾಜಿ ಸೈನಿಕ ಎಂದರೆ ಕೇಂದ್ರ ಸಶಸ್ತ್ರ ದಳಗಳಾದ ನಿಯಮಿತ ಭೂದಳ, ನೌಕಾದಳ ಮತ್ತು ವಾಯು ದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಯೋಧನಲ್ಲದ) ಸೇವೆ ಸಲ್ಲಿಸಿದ ವ್ಯಕ್ತಿ ಆದರೆ ಡಿಫೆನ್ಸ್ ಸೆಕ್ಯೂರಿಟಿ ಕೋರ್, ಜನರಲ್ ರಿಸರ್ವ್ ಇಂಜಿನಿಯರಿಂಗ್ ಫೋರ್ಸ್, ಲೋಕ ಸಹಾಯಕ ಸೇವೆ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಸೇರ್ಪಡೆಯಾಗುವುದಿಲ್ಲ ಮತ್ತು
2. ಕೇಂದ್ರ ಸಶಸ್ತ್ರ ದಳಗಳಲ್ಲಿ ಸೇವೆ ಸಲ್ಲಿಸುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು (ಸಂದರ್ಭಾನುಸಾರ ಹೆಂಡತಿ ಅಥವಾ ಗಂಡ ಮತ್ತು ಮಕ್ಕಳು ಮತ್ತು ಮಲ ಮಕ್ಕಳು) ಮಾಜಿ ಸೈನಿಕ ಮೀಸಲಾತಿಗೆ ಅರ್ಹರಾಗಿರುತ್ತಾರೆ. ಆದರೆ ಅಂತಹವರುಗಳಿಗೆ ವಯೋಮಿತಿ ಸಡಿಲಿಕೆಯನ್ನು ನೀಡಲಾಗುವುದಿಲ್ಲ.
3. **ಅ)** ಅಂತಹ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ

ಅಥವಾ

ಆ) ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಯಿಂದ ಬಿಡುಗಡೆಯಾದ ಅಥವಾ ವ್ಯಕ್ತಿಯ ಹಿಡಿತಕ್ಕೂ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಅಂತಹ ಸೇವೆಯಲ್ಲಿ ಬಿಡುಗಡೆಯಾದವನು

ಅಥವಾ

ಇ) ಸ್ವಂತ ಕೋರಿಕೆ ಹೊರತುಪಡಿಸಿ, ಸಿಬ್ಬಂದಿ ಕಡಿತದ ಪರಿಣಾಮದಿಂದ ಅಂತಹ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ

ಅಥವಾ

ಈ) ತಮ್ಮ ಸ್ವಂತ ಕೋರಿಕೆ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದುಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ನಿರ್ದಿಷ್ಟ ಅಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಟಿ ಪಡೆಯುತ್ತಿರುವ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ಹೆಸರಿಸಿದ ವರ್ಗದ ಸಿಬ್ಬಂದಿಯವರು.

(i) ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಿಂಚಣಿದಾರರು.
(ii) ಮಿಲಿಟರಿ ಸೇವೆಯಿಂದಾಗಿ ಉಂಟಾದ ದೈಹಿಕ ಅಸಮರ್ಥತೆ ಹೊಂದಿ ಬಿಡುಗಡೆಯಾದ ವ್ಯಕ್ತಿ.
(iii) ಗ್ಯಾಲಂಟ್ರಿ ಪ್ರಶಸ್ತಿ ವಿಜೇತರು.

ವಿವರಣೆ:

(1) ಕೇಂದ್ರ ಸಶಸ್ತ್ರ ದಳದ ಸೇವೆಯಲ್ಲಿ ವ್ಯಕ್ತಿಗಳು ಸೇವೆಯಿಂದ ನಿವೃತ್ತಿ ಹೊಂದಿದ ನಂತರ ಮಾಜಿ ಸೈನಿಕರ ವರ್ಗದಡಿ ಬರುವ ವ್ಯಕ್ತಿಗೆ ಒಪ್ಪಂದವು ಪೂರ್ಣವಾಗಲು ಒಂದು ವರ್ಷಕ್ಕೆ ಮುನ್ನ ಉದ್ಯೋಗಕ್ಕೆ ಅರ್ಜಿ ಹಾಕಿ ಳ್ಳಲು ಹಾಗೂ ಅವರಿಗೆ ಮಾಜಿ ಸೈನಿಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹೊಂದಲು ಅನುಮತಿ ನೀಡಲಾಗಿದೆ. ಆದರೆ ಸಮವಸ್ತ್ರವನ್ನು ತ್ಯಜಿಸಲು ಅನುಮತಿ ನೀಡುವವರಿಗೆ ರಾಜ್ಯ ನಾಗರಿಕ ಸೇವೆ ಅಥವಾ ಹುದ್ದೆಗಳಿಗೆ ನೇಮಕ ಹೊಂದುವಂತಿಲ್ಲ.

(2) ಸೈನಿಕರ ಸೇವಾ ಒಪ್ಪಂದವನ್ನು ಮುಕ್ತಾಯಕ್ಕೆ ಮುನ್ನ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅವರ ಮೇಲಾಧಿಕಾರಿಗಳಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಪಡೆದು ಅದರ ಮೂಲ ಪ್ರತಿಯನ್ನು ಕಡ್ಡಾಯವಾಗಿ ಹಾಜರುಪಡಿಸಬೇಕು.

ಗಮನಿಸಿ: BSF, CRPF, CISF ಪಡೆಗಳಿಂದ ನಿವೃತ್ತರಾದವರನ್ನು **"ಮಾಜಿ ಸೈನಿಕ"** ಎಂದು ಪರಿಗಣಿಸಲಾಗುವುದಿಲ್ಲ.

(3) ಕರ್ನಾಟಕ ನಾಗರಿಕ ಸೇವೆ (ಸಾಮಾನ್ಯ ನೇಮಕಾತಿ) ನಿಯಮಾವಳಿ 1977ರ ನಿಯಮ 9(1)ರನ್ವಯ ಕೇಂದ್ರ ಸಶಸ್ತ್ರದಳದಲ್ಲಿ ಸೇವೆ ಸಲ್ಲಿಸುವಾಗ ಹತರಾದ **ಅಥವಾ** ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು ಕರ್ತವ್ಯ ನಿರ್ವಹಿಸುತ್ತಿದ್ದ ಕೇಂದ್ರ ಶಸಸ್ತ್ರದಳದ ಅಧಿಕಾರಿಗಳಿಂದ ಅವಲಂಬಿತ ಪ್ರಮಾಣ ಪತ್ರ ಮತ್ತು ಸೈನಿಕ ಬೋರ್ಡ್‌ನಿಂದ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು.

ಟಿಪ್ಪಣಿ:

(i) ಮಾಜಿ ಸೈನಿಕ ಮೀಸಲಾತಿ ಕೋರುವ ಅಭ್ಯರ್ಥಿಗಳು ನಿಯಮಾನುಸಾರ ಆ ಮೀಸಲಾತಿಗೆ ಅರ್ಹರೇ? ಎಂಬುದನ್ನು ಹತ್ತಿರದ ಜಿಲ್ಲಾ ಸೈನಿಕ ಬೋರ್ಡ್‌ನಿಂದ ತಿಳಿದುಕೊಂಡು ಅರ್ಜಿಯನ್ನು ಸಲ್ಲಿಸಲು ತಿಳಿಸಿದೆ.

(ii) ಸೈನ್ಯದಿಂದ ನಿವೃತ್ತಿ ಹೊಂದಿರುವ ಮಾಜಿ ಸೈನಿಕರ ಹೆಂಡತಿ ಅಥವಾ ಮಕ್ಕಳು ಮತ್ತು ಮಲ ಮಕ್ಕಳು ಮಾಜಿ ಸೈನಿಕ ಮೀಸಲಾತಿಗೆ ಅರ್ಹರಿರುವುದಿಲ್ಲ. ಆದರೆ ಕೇಂದ್ರ ಸಶಸ್ತ್ರ ಸೇನೆಯಲ್ಲಿ ಸೇವೆ ಸಲ್ಲಿಸುವಾಗ ಹತರಾದ/ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ಮಾಜಿ ಸೈನಿಕರ ಹೆಂಡತಿ ಅಥವಾ ಮಕ್ಕಳು ಮತ್ತು ಮಲ ಮಕ್ಕಳು ಮಾತ್ರ ಮಾಜಿ ಸೈನಿಕ ಮೀಸಲಾತಿಗೆ ಅರ್ಹರಾಗಿರುತ್ತಾರೆ.

15.4. ಅಂಗವಿಕಲ/ವಿಶೇಷ ಚೇತನ ಅಭ್ಯರ್ಥಿ ಮೀಸಲಾತಿ:

(i) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 149 ಎಸ್‌ಆರ್‌ಆರ್ 2020 ದಿನಾಂಕ: 25.09.2020ರಲ್ಲಿ ರಾಜ್ಯ ಸಿವಿಲ್ ಸೇವೆಗಳ ಗ್ರೂಪ್ 'ಸಿ' ಹುದ್ದೆಗಳಿಗೆ ಶೇಕಡ 5ರಷ್ಟು ಅಂಗವಿಕಲರಿಗೆ ಮೀಸಲಾತಿ ಕಲ್ಪಿಸಿದ್ದು, ಇದರನ್ವಯ ಶೇಕಡ 40ಕ್ಕಿಂತ ಕಡಿಮೆ ಇಲ್ಲದಂತಹ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಮಾತ್ರ ಈ ಮೀಸಲಾತಿಯನ್ನು ಕೋರಲು ಅರ್ಹರು.

(ii) ಸರ್ಕಾರದ ಅಧಿಕೃತ ಜ್ಞಾಪನಾ ಸಂಖ್ಯೆ: ಸಿಆಸುಇ 115 ಸೆನೆನಿ 2005 ದಿನಾಂಕ: 19.11.2005ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅಂಗವಿಕಲತೆ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಮಮಇ 65 ಪಿಹೆಚ್‌ಪಿ 2010, ದಿನಾಂಕ:21.09.2011 ರಂತೆ (a) ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿನ ವೈದ್ಯಕೀಯ ಪ್ರಾಧಿಕಾರ, (b) ತಾಲ್ಲೂಕು ಮಟ್ಟದ ವೈದ್ಯಕೀಯ ಪ್ರಾಧಿಕಾರ, (c) ಜಿಲ್ಲಾ ಮಟ್ಟದ ವೈದ್ಯಕೀಯ ಪ್ರಾಧಿಕಾರ ಮತ್ತು (d) ಬೆಂಗಳೂರು ವೈದ್ಯಕೀಯ ಪ್ರಾಧಿಕಾರ ಇವರಿಂದ ಪಡೆದ ಪ್ರಮಾಣ ಪತ್ರ/UDID ಪ್ರಮಾಣ ಪತ್ರವನ್ನು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು. ಇತರೆ ಯಾವುದೇ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಪಡೆಯಲಾಗಿರುವ ಪ್ರಮಾಣ ಪತ್ರಗಳನ್ನು/ ಗುರುತಿನ ಚೀಟಿಯ ಪ್ರತಿಗಳನ್ನು ಪರಿಗಣಿಸಲು ಬರುವುದಿಲ್ಲ.

(iii) ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹರಾದಾಗ ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ಹಾಗೂ ನೇಮಕಾತಿ ಪ್ರಾಧಿಕಾರಗಳು ನಡೆಸುವ ವೈದ್ಯಕೀಯ ಮಂಡಳಿ ಪರಿಶೀಲನೆಗೆ ಹಾಜರಾಗಿ ನಿಯಮಾನುಸಾರ ಅರ್ಹತೆಗಳಿಸಬೇಕು. ನೇಮಕಾತಿ ಪ್ರಾಧಿಕಾರಗಳು ರಚಿಸುವ ವೈದ್ಯಕೀಯ ಮಂಡಳಿ ನಡೆಸುವ ವೈದ್ಯಕೀಯ ಪರಿಶೀಲನೆಯಲ್ಲಿ ನಿಯಮಾನುಸಾರ ಅಂಗವಿಕಲತೆ ಸಾಬೀತಾಗುವುದು ಕಡ್ಡಾಯವಾಗಿರುತ್ತದೆ. ಅರ್ಜಿ ಸಲ್ಲಿಸುವಾಗ ಪಡೆದ ಪ್ರಮಾಣ ಪತ್ರಗಳನ್ನೇ ಆಧರಿಸಿ ನೇಮಕಾತಿ ಆದೇಶ ನೀಡಲಾಗುವುದಿಲ್ಲ. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ವಿಶೇಷ ಚೇತನ ಮೀಸಲಾತಿಯನ್ನು ರದ್ದುಪಡಿಸಲಾಗುವುದು.

ವಿಶೇಷ ಸೂಚನೆ:

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಬ್ಲುಸಿಡಿ 111 ಪಿಹೆಚ್‌ಪಿ 2022 ದಿನಾಂಕ 19.08.2003ರನ್ವಯ [in exercise of the powers conferred under Sub-section (1) of section 34 of the Rights of Person with Disabilities Act 2016, the Government of Karnataka hereby identifies the post specified in the Schedule-II (Sl.No. 2 – Beat Forester (Forest Guard as per C&R Rules) – Group C) – Categories of disabilities identified by Expert Committee] ಗಸ್ತು ಅರಣ್ಯ ಪಾಲಕ (ವೃಂದ ಮತ್ತು ನೇಮಕಾತಿ ನಿಯಮಗಳಂತೆ 'ಅರಣ್ಯ ರಕ್ಷಕ') ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಅಭ್ಯರ್ಥಿಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ***ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಾಗಿರುವ ಮೀಸಲಾತಿಯಡಿಯಲ್ಲಿ LC – Leprosy Cured, AAV – Acid Attack Victims and MI – Mental Illness ಮಾತ್ರ ಭರ್ತಿ ಮಾಡಲು ಅವಕಾಶವಿರುತ್ತದೆ.***

15.5. ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿಗಳಿಗೆ ಮೀಸಲಾತಿ:

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 23 ಸೆನೆನಿ 99, ದಿನಾಂಕ: 23.11.2000 ಮತ್ತು ತಿದ್ದುಪಡಿ ಆದೇಶ ಸಂಖ್ಯೆ: ಸಿಆಸುಇ 252 ಸೆನೆನಿ 2020 (ಭಾಗ-1), ದಿನಾಂಕ: 07.07.2021 ರನ್ವಯ ಯೋಜನೆಗಳಿಂದ ನಿರ್ವಸಿತರಾದ (ಆದರೆ ಈ ನಿಯಮಗಳು ಜಾರಿಯಾಗುವ 25 ವರ್ಷಕ್ಕೆ ಮುನ್ನ ನಿರ್ವಸಿತರಾದ ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಾತಿ ಅನ್ವಯವಾಗುವುದಿಲ್ಲ) ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ಸಂಬಂಧಿಸಿದ ತಹಶೀಲ್ದಾರರಿಂದ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಅರ್ಜಿಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು.

15.6. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಮೀಸಲಾತಿ:

- ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 71 ಸೇನೆನಿ 2001 ದಿನಾಂಕ: 24.10.2002ರನ್ವಯ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳನ್ನು ಕ್ಲೇಮ್ ಮಾಡುವ ಅಭ್ಯರ್ತಿಗಳು **1 ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲಾ ಮುಖ್ಯೋಪಧ್ಯಾಯರ ಸಹಿ, ಮೊಹರು ಮತ್ತು ಜಾರಿ ಮಾಡಿದ ದಿನಾಂಕದೊಂದಿಗೆ ನಿಗಧಿತ ನಮೂನೆಯಲ್ಲಿ ಪಡೆದು, ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಮಾಡಿಸಿ ಮತ್ತು ಮೊಹರಿನೊಂದಿಗೆ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದು, ಸದರಿ ಪ್ರಮಾಣ ಪತ್ರವನ್ನು ಮೂಲ ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಹಾಜರು ಪಡಿಸತಕ್ಕದ್ದು.**
- ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 43 ಸೇವನೆ 2020, ದಿನಾಂಕ: 05.03.2021ರನ್ವಯ ಕನ್ನಡ ಭಾಷಾ ಪರೀಕ್ಷೆಗಾಗಿ ಸರ್ಕಾರಿ ಅಧಿಸೂಚನೆ ಸಂಖ್ಯೆ: ಸಿಆಸುಇ 102 ಸೇವನೆ 2022, ದಿನಾಂಕ: 24.03.2025ರನ್ವಯ ಅಭ್ಯರ್ಥಿಯು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅಥವಾ ರಾಜ್ಯ ಸರ್ಕಾರವು ಅದಕ್ಕೆ ತತ್ಸಮಾನವೆಂದು ಘೋಷಿಸಿದ ಯಾವುದೇ ಪರೀಕ್ಷೆಯಲ್ಲಿ ಅಥವಾ ಎಸ್.ಎಸ್.ಎಲ್.ಸಿ. ಗಿಂತ ಉನ್ನತ ಮಟ್ಟದ ಪರೀಕ್ಷೆಗಳಲ್ಲಿ ಕನ್ನಡ ವಿಷಯವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಅಭ್ಯಸಿಸಿದ್ದರೆ ಅಥವಾ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿ ಇಂತಹ ಪರೀಕ್ಷೆಗಳನ್ನು ಪಾಸು ಮಾಡಿದ್ದರೆ ಅಥವಾ ಆಯೋಗ ಅಥವಾ ಇನ್ನಿತರೆ ಯಾವುದೇ ಆಯ್ಕೆ ಪ್ರಾಧಿಕಾರವು ಈ ಹಿಂದೆ ನಡೆಸಿದ ಕನ್ನಡ

ಭಾಷೆಯ ಪರೀಕ್ಷೆಯಲ್ಲಿ (ಕಡ್ಡಾಯ ಕನ್ನಡ ಪರೀಕ್ಷೆ) ಉತ್ತೀರ್ಣರಾಗಿದ್ದರೆ ಅಂತಹ ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ನೀಡತಕ್ಕದ್ದು ಎಂದು ಆದೇಶಿಸಲಾಗಿರುತ್ತದೆ.

ಒಂದು ವೇಳೆ ಅಭ್ಯರ್ಥಿಗಳಲ್ಲಿ ಸರ್ಕಾರಿ ಅಧಿಸೂಚನೆ ಸಂಖ್ಯೆ: ಸಿಆಸುಇ 102 ಸೇವನೆ 2022, ದಿನಾಂಕ: 24.03.2025ರನ್ವಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣಗೊಳ್ಳದೇ ಇದ್ದಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 43 ಸೇವನೆ 2020, ದಿನಾಂಕ: 05.03.2021ರನ್ವಯ ಎಸ್.ಎಸ್.ಎಲ್.ಸಿ. ಹಂತದಲ್ಲಿನ ಪ್ರಥಮ ಭಾಷೆ ಕನ್ನಡದನ್ವಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಗರಿಷ್ಟ 150 ಅಂಕಗಳ ಒಂದು ಪ್ರಶ್ನೆ ಪತ್ರಿಕೆಯಲ್ಲಿ ಅಭ್ಯರ್ಥಿಯು ಅರ್ಹತೆ ಹೊಂದಲು ಕನಿಷ್ಟ 50 ಅಂಕಗಳನ್ನು ಗಳಿಸಬೇಕಾಗಿರುತ್ತದೆ.

15.7. ಗ್ರಾಮೀಣ ಅಭ್ಯರ್ಥಿಗಳಿಗೆ ಮೀಸಲಾತಿ:

15.7.1. ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಯು **1 ರಿಂದ 10ನೇ** ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಹೊಂದಿರಬೇಕು, ಮತ್ತು

15.7.2. ಅಭ್ಯರ್ಥಿಯು ವ್ಯಾಸಂಗ ಮಾಡಿದ ಸ್ಥಳವು ವ್ಯಾಸಂಗ ಮಾಡಿದ ಅವಧಿಯಲ್ಲಿ ಅಂದಿನ ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976ರ ಅಥವಾ ಕರ್ನಾಟಕ ಪೌರ ಸಭೆಗಳ ಅಧಿನಿಯಮ 1964ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಒಂದು ದೊಡ್ಡ ನಗರ ಪ್ರದೇಶ, ಒಂದು ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆಯ ಹಂತದಲ್ಲಿರುವ ಪ್ರದೇಶಗಳ **ಹೊರತಾಗಿ ಇತರ ಯಾವುದೇ ಪ್ರದೇಶದಲ್ಲಿರುವ ಶಾಲೆಯಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಯಾಗಿರಬೇಕು**, ಮತ್ತು

15.7.3. ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಯು ಕರ್ನಾಟಕ ಅಧಿಸೂಚನೆ ಸಂಖ್ಯೆ: ಸಿಆಸುಇ 8 ಸೇನೆನಿ 2001 ದಿನಾಂಕ: 13.02.2001ರ ಪ್ರಕಾರ ಮೇಲೆ ಪರಿಭಾಷಿಸಿದಂತೆ ತರಗತಿ 1 ರಿಂದ 10ನೇ ತರಗತಿಯ ವರೆಗೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಹೊಂದಿರುವವರು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 96 ಸೆನೆನಿ 2005 ದಿನಾಂಕ: 10.08.2005ರಲ್ಲಿ ನಿಗದಿಪಡಿಸಿದ **ನಮೂನೆ-2 ರ** ಪ್ರಮಾಣ ಪತ್ರವನ್ನು ಶಾಲಾ ಮುಖ್ಯೋಪಾಧ್ಯಾಯರಿಂದ ಸಹಿ ಮಾಡಿಸಿ ಮತ್ತು **ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ಸಹಿ ಮಾಡಿಸಿದ** ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು. **ಗ್ರಾಮೀಣ ಮೀಸಲಾತಿ ಕೋರುವ ಸಾಮಾನ್ಯ ಅರ್ಹತೆಗೆ ಸೇರಿದ ಅಭ್ಯರ್ಥಿಗಳಿಗೆ ನಿಗದಿತ ನಮೂನೆ-1 (ನಾನ್-ಕ್ರೀಮಿ ಲೇಯರ್) ಮತ್ತು ನಮೂನೆ-2 ಕಡ್ಡಾಯವಾಗಿರುತ್ತದೆ.**

15.7.4. ಅಂತೆಯೇ, ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-I, ಪ್ರವರ್ಗ-IIಎ, ಪ್ರವರ್ಗ-IIಬಿ, ಪ್ರವರ್ಗ-IIIಎ, ಪ್ರವರ್ಗ-IIIಬಿ ಸೇರಿದ ಅಭ್ಯರ್ಥಿಗಳು ನಮೂನೆ-2ರಲ್ಲಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದು, ಸದರಿ ಪ್ರಮಾಣ ಪತ್ರವನ್ನು ಮೂಲ ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಹಾಜರು ಪಡಿಸತಕ್ಕದ್ದು.

ಸೂಚನೆ: *ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-I, ಪ್ರವರ್ಗ-IIಎ, ಪ್ರವರ್ಗ-IIಬಿ, ಪ್ರವರ್ಗ-IIIಎ, ಪ್ರವರ್ಗ-IIIಬಿ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ಮೀಸಲಾತಿ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ ಅಂತಹ ಅಭ್ಯರ್ಥಿಗಳು Non-Creamy Layer ಪ್ರಮಾಣ ಪತ್ರವನ್ನು ಹೊಂದಿರದಿದ್ದಲ್ಲಿ ಅವರು ಗ್ರಾಮೀಣ ಮೀಸಲಾತಿಗೆ ಅನರ್ಹರಾಗುತ್ತಾರೆ.*

15.8. ತೃತೀಯ ಲಿಂಗ ಅಭ್ಯರ್ಥಿಗಳಿಗೆ ಮೀಸಲಾತಿ:

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 179 ಸೇನೆನಿ 2020, ದಿನಾಂಕ: 06.07.2021ರಲ್ಲಿ ರಾಜ್ಯ ಸಿವಿಲ್ ಸೇವೆಗಳ ಸಮೂಹ-'ಎ', 'ಬಿ', 'ಸಿ' ಮತ್ತು 'ಡಿ' ಗುಂಪಿನ ಹುದ್ದೆಗಳಿಗೆ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗದಿಂದ ಶೇಕಡಾ 1(ಒಂದು)ರಷ್ಟು ಹುದ್ದೆಗಳನ್ನು ತೃತೀಯ ಲಿಂಗದ ಅಭ್ಯರ್ಥಿಗಳಿಗೆ ಮೀಸಲಾತಿ ಕಲ್ಪಿಸಿದ್ದು, ತೃತೀಯ ಲಿಂಗದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು **ಕೇಂದ್ರ ಅಧಿನಿಯಮ ತೃತೀಯ ಲಿಂಗ**

ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) 2019ರಲ್ಲಿ ನಿಗದಿಪಡಿಸಿರುವಂತೆ ಜಿಲ್ಲಾ ಮ್ಯಾಜಿಸ್ಟ್ರೇಟ್‌ರವರಿಂದ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವಂತೆ ಪಡೆದಿಟ್ಟುಕೊಂಡಿರತಕ್ಕದ್ದು. ಅರ್ಹರಾದಾಗ ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು.

15.9. ಕ್ರೀಡಾ-ಸಾಧಕ ಅಭ್ಯರ್ಥಿಗಳಿಗೆ:

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 295 ಸೇನೆನಿ 2023 ದಿನಾಂಕ: 03-10-2026 ರಲ್ಲಿ ರಾಜ್ಯ ಸಿವಿಲ್ ಸೇವೆಗಳ ಹುದ್ದೆಗಳಿಗೆ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗದಿಂದ ಶೇಕಡಾ 2 (ಎರಡರಷ್ಟು) ರಷ್ಟು ಹುದ್ದೆಗಳನ್ನು ಕ್ರೀಡಾ-ಸಾಧಕ ಅಭ್ಯರ್ಥಿಗಳಿಗೆ ಮೀಸಲಾತಿ ಕಲ್ಪಿಸಲಾಗಿರುತ್ತದೆ.

ವಿವರಣೆ:- ಕ್ರೀಡಾ-ಸಾಧಕ ಎಂದರೆ, ಕನಿಷ್ಟ ಹತ್ತು ವರ್ಷಗಳ ಕಾಲ ಕರ್ನಾಟಕ ರಾಜ್ಯದಲ್ಲಿ ವಾಸವಾಗಿರುವ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 295 ಸೇನೆನಿ 2023 ದಿನಾಂಕ: 03-10-2026 ರಲ್ಲಿ ನಿರ್ದಿಷ್ಟಪಡಿಸಿದ ಕ್ರೀಡೆಗಳು ಅಥವಾ ಆಟಗಳಲ್ಲಿ ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ಸ್ಪರ್ಧೆಗಳಲ್ಲಿ ವೈಯಕ್ತಿಕವಾಗಿ ಅಥವಾ ತಂಡದ ಸದಸ್ಯರಾಗಿ ಭಾಗವಹಿಸಿ, ಕರ್ನಾಟಕವನ್ನು ಪ್ರತಿನಿಧಿಸಿದ ಕ್ರೀಡಾಪಟುಗಳು ಅಥವಾ ಇತರೆ ರಾಜ್ಯ ಅಥವಾ ಭಾರತೀಯ ರೈಲ್ವೆಯಂತಹ ಸಂಸ್ಥೆಗಳನ್ನು ಪ್ರತಿನಿಧಿಸಿದ್ದಲ್ಲಿ, ಕನಿಷ್ಟ ಒಂದು ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ(recognized) ರಾಷ್ಟ್ರೀಯ ಚಾಂಪಿಯನ್‌ಶಿಪ್ (National Championship) ಅಥವಾ ಕನಿಷ್ಟ ಒಂದು ರಾಷ್ಟ್ರೀಯ ಕ್ರೀಡಾಕೂಟ (National Games) ದಲ್ಲಿ ಕರ್ನಾಟಕ ರಾಜ್ಯವನ್ನು ಕಡ್ಡಾಯವಾಗಿ ಪ್ರತಿನಿಧಿಸಿದ ಕ್ರೀಡಾಪಟುಗಳು ಮಾತ್ರ.

ಸದರಿ ಅಧಿಸೂಚನೆಯಲ್ಲಿ ತಿಳಿಸಿರುವಂತೆ, ಕ್ರೀಡಾ ಸಾಧಕರಿಗೆ ಅವರ ಸಾಧನೆಗೆ ಅನುಗುಣವಾಗಿ ಸಂಬಂಧಿತ ಸ್ಪರ್ಧೆಗೆ, ಸಂಬಂಧಿತ ಪ್ರಾಧಿಕಾರದಿಂದ ಪ್ರಮಾಣೀಕರಿಸಲ್ಪಟ್ಟಿದ್ದಲ್ಲಿ, ನಿರ್ದಿಷ್ಟ ಪಡಿಸಿರುವಂತೆ ಕೃಪಾಂಕಗಳನ್ನು (Weightage Marks) ನೀಡಲಾಗುವುದು. ಕ್ರೀಡಾ ಸಾಧಕರು ಅವರ ಸಾಧನೆಗೆ ಅನುಗುಣವಾಗಿ ಸಂಬಂಧಿತ ಸ್ಪರ್ಧೆಗೆ, ಸಂಬಂಧಿತ ಪ್ರಾಧಿಕಾರದಿಂದ ಪ್ರಮಾಣೀಕರಿಸಿದ ಪ್ರಮಾಣ ಪತ್ರವನ್ನು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವಂತೆ ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದಾಗ ಇದೇ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ನೇಮಕಾತಿ ಪ್ರಾಧಿಕಾರಕ್ಕೆ ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯು ರದ್ದಾಗುವುದು.

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 295 ಸೇನೆನಿ 2023 ದಿನಾಂಕ: 03-10-2026 ರಲ್ಲಿ ತಿಳಿಸಿರುವಂತೆ, ಕ್ರೀಡಾ ಸಾಧಕರಿಗೆ ಮೀಸಲಿರಿಸಿದ ಹುದ್ದೆಗಳನ್ನು ಪರಿಗಣಿಸಲಾಗುವುದು (ದಿನಾಂಕ: 03-10-2026 ರ ಅಧಿಸೂಚನೆಯನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗಿದೆ).

ಟಿಪ್ಪಣಿ: *ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 05 ಸೆಹಿಮ 2026, ದಿನಾಂಕ: 13.10.2026ರನ್ವಯ ಸಮತಳ ಮೀಸಲಾತಿಯ ಹುದ್ದೆಗಳಲ್ಲಿ ಒಂದು ವೇಳೆ ಮಾಜಿ ಸೈನಿಕರಿಗೆ /ಯೋಜನೆಗಳಿಂದ ನಿರ್ವಸಿತರಾದವರಿಗೆ / ತೃತೀಯ ಲಿಂಗಿಗಳಿಗೆ / ಕ್ರೀಡಾ ಸಾಧಕರಿಗೆ ಸಂಬಂಧಿಸಿದ ಸಮತಳ ಮೀಸಲಾತಿ ವರ್ಗಕ್ಕೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಎದುರಾಗಿ ಆ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, ಆ ರಿಕ್ತ ಸ್ಥಾನಗಳನ್ನು ಅದೇ ನೇರ ಮೀಸಲಾತಿ(Vertical Reservation)ಗೆ ಸೇರಿದ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು.*

15.10. ಅನುಚ್ಛೇದ 371 (ಜೆ) ರಂತೆ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮೀಸಲಾತಿ:

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್- ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು 2013ಕ್ಕೆ ಸಂಬಂಧಿಸಿದಂತೆ ನೇರ ನೇಮಕಾತಿಯಲ್ಲಿ ಸ್ಥಳೀಯ ವ್ಯಕ್ತಿ ಎಂಬ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು **ಅನುಬಂಧ-ಎ** ಯಲ್ಲಿರುವ

ನಮೂನೆಯಲ್ಲಿಯೇ ಅರ್ಹತಾ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರವಾದ ಸಂಬಂಧಪಟ್ಟ **ಉಪ ವಿಭಾಗದ ಸಹಾಯಕ ಆಯುಕ್ತರಿಂದ** ಪಡೆದಿಟ್ಟುಕೊಳ್ಳತಕ್ಕದ್ದು. ಮೂಲ ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಸದರಿ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದ್ದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ ಅವರ ಅಭ್ಯರ್ಥಿತನವನ್ನು ಸದರಿ ಮೀಸಲಾತಿಯಡಿ ಪರಿಗಣಿಸಲಾಗುವುದಿಲ್ಲ. ಈ ಪ್ರಮಾಣ ಪತ್ರದ ನಮೂನೆಯನ್ನು ಪ್ರತ್ಯೇಕವಾಗಿ ನೀಡಲಾಗಿದೆ. ಈ ನಮೂನೆಯನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಗಳಲ್ಲಿ ಪಡೆಯಲಾದ ಅರ್ಹತಾ ಪ್ರಮಾಣ ಪತ್ರವನ್ನು ತಿರಸ್ಕರಿಸಲಾಗುವುದು.

ವಿಶೇಷ ಸೂಚನೆ: *ಅಭ್ಯರ್ಥಿಗಳು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವುದರಿಂದ, ಈ ಮೇಲಿನ ಎಲ್ಲಾ ಪ್ರಮಾಣ ಪತ್ರಗಳನ್ನು/ದಾಖಲೆಗಳು ಆನ್‌ಲೈನ್ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಸಿಂಧುವಾಗಿರಬೇಕು. ಆಯ್ಕೆ ಪ್ರಾಧಿಕಾರವು ಪರಿಶೀಲನೆಗಾಗಿ ಹಾಜರುಪಡಿಸಲು ಸೂಚಿಸಿದಾಗ, ಅಭ್ಯರ್ಥಿಯು ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಮೀಸಲಾತಿಯ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ತಪ್ಪದೆ ಹಾಜರುಪಡಿಸತಕ್ಕದ್ದು.*

16. ಸೂಚನೆಗಳು:

16.1. ಗಸ್ತು ಅರಣ್ಯ ಪಾಲಕ (ವೃಂದ ಮತ್ತು ನೇಮಕಾತಿ ನಿಯಮಗಳಂತೆ 'ಅರಣ್ಯ ರಕ್ಷಕ') ಹುದ್ದೆಗಳ ನೇರ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಿರುವ ಎಲ್ಲಾ ವೃತ್ತಗಳಲ್ಲಿಯೂ ಏಕ ಕಾಲದಲ್ಲಿ ನೇಮಕಾತಿಗೆ ಸಂಬಂಧಿಸಿದ ಶಾರೀರಿಕ ಮಾನದಂಡಗಳ ಪರೀಕ್ಷೆ, ದೈಹಿಕ ತಾಳ್ಮಿಕೆ ಪರೀಕ್ಷೆ ಮತ್ತು ದೈಹಿಕ ಸಮರ್ಥತೆ ಪರೀಕ್ಷೆಗಳನ್ನು ನಡೆಸಲಾಗುವುದು.

16.2. ಅಭ್ಯರ್ಥಿಗಳು ನೇರ ನೇಮಕಾತಿಯ ಎಲ್ಲಾ ಪರೀಕ್ಷೆಗಳಿಗೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು ಹಾಗೂ ಈ ಎಲ್ಲಾ ಪರೀಕ್ಷೆಗಳು ಒಂದಕ್ಕಿಂತ ಹೆಚ್ಚಿನ ದಿನ ನಡೆಯುವ ಸಾಧ್ಯತೆ ಇರುವುದರಿಂದ ಈ ಬಗ್ಗೆ ಎಲ್ಲಾ ಪೂರ್ವಸಿದ್ಧತೆ ಹಾಗೂ ತಂಗುವಿಕೆ ಬಗ್ಗೆ ಸ್ವಂತ ಖರ್ಚಿನಲ್ಲಿ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು.

17. ನೇಮಕಾತಿ ಹೊಂದಿದ ಅಭ್ಯರ್ಥಿಗಳ ತರಬೇತಿ, ಸ್ಥಳ ನಿಯುಕ್ತಿ ಹಾಗೂ ಪರೀಕ್ಷಾರ್ಥ ಅವಧಿ:

ಗಸ್ತು ಅರಣ್ಯ ಪಾಲಕ (ವೃಂದ ಮತ್ತು ನೇಮಕಾತಿ ನಿಯಮಗಳಂತೆ 'ಅರಣ್ಯ ರಕ್ಷಕ')ರಾಗಿ ನೇಮಕಗೊಂಡ ನಂತರ ಸದರಿ ಅಭ್ಯರ್ಥಿಯು ತರಬೇತಿಗೆ ಹಾಜರಾಗುವ ಮೊದಲು ನೇಮಕಾತಿ ಪ್ರಾಧಿಕಾರದ ಸಮಕ್ಷಮ ಇಲಾಖೆಯಲ್ಲಿ ನೇಮಕಾತಿಯಾದ ದಿನಾಂಕದಿಂದ ಕನಿಷ್ಠ ಐದು (5) ವರ್ಷ ಸೇವೆ ಸಲ್ಲಿಸುವುದಾಗಿ, ತಪ್ಪಿದಲ್ಲಿ ತರಬೇತಿಯ ಬಗ್ಗೆ ಭರಿಸಿದ ಸಂಪೂರ್ಣ ವೆಚ್ಚವನ್ನು (ಸರ್ಕಾರವು ನಿಗದಿಪಡಿಸಿದ ಮಾನದಂಡಗಳಂತೆ) ಸರ್ಕಾರಕ್ಕೆ ಪಾವತಿ ಮಾಡಲು ಮತ್ತು ಆಯ್ಕೆ ಪ್ರಾಧಿಕಾರ ನಿಗದಿಪಡಿಸುವ ಇತರೆ ಷರತ್ತುಗಳನ್ನು ಪೂರೈಸಲು ಸಿದ್ಧವಿರುವುದಾಗಿ, ಹಾಗೂ ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿ, ಅಲ್ಲದೆ ಸರ್ಕಾರವು ಸೂಚಿಸಿದ ಯಾವುದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸಲು ಸಿದ್ಧವಿರುವುದಾಗಿ (ರೂ. 100) ಛಾಪಾಕಾಗದದಲ್ಲಿ ಅಭ್ಯರ್ಥಿಯು ಕರಾರು ಪತ್ರವನ್ನು ಬರೆದು ಕೊಡತಕ್ಕದ್ದು.

ನೇಮಕಾತಿ ಹೊಂದಿದ ಪರೀಕ್ಷಾರ್ಥ ಅಭ್ಯರ್ಥಿಗಳು ನಿಗದಿಪಡಿಸಿದ ಈ ಕೆಳಕಂಡ ಬುನಾದಿ ತರಬೇತಿ (Induction Training) ಯನ್ನು ಯಶಸ್ವಿಯಾಗಿ ಪೂರೈಸಬೇಕಾಗಿರುತ್ತದೆ.

ಹುದ್ದೆ	ಬುನಾದಿ ತರಬೇತಿ ಅವಧಿ	ಪರೀಕ್ಷಾರ್ಥ ಅವಧಿ (ತರಬೇತಿ ಅವಧಿ ಸೇರಿ)
ಗಸ್ತು ಅರಣ್ಯ ಪಾಲಕ *(ವೃಂದ ಮತ್ತು ನೇಮಕಾತಿ ನಿಯಮಗಳಂತೆ 'ಅರಣ್ಯ ರಕ್ಷಕ')*	9 ತಿಂಗಳು	36 ತಿಂಗಳು

ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಪ್ರಸ್ತುತ ವರ್ಗಾವಣೆ/ಸ್ಥಳ ನಿಯುಕ್ತಿ ಸಂಬಂಧ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಅರಣ್ಯ ಅಧಿಕಾರಿಗಳ ಮತ್ತು ಇತರೆ ಸಿಬ್ಬಂದಿಗಳ ವರ್ಗಾವಣೆ ಮತ್ತು ಸ್ಥಳನಿಯುಕ್ತಿಗಳ ನಿಯಂತ್ರಣ) ಅಧಿನಿಯಮ 2016 ಹಾಗೂ ನಿಯಮಾವಳಿ 2019 ಚಾಲ್ತಿಯಲ್ಲಿದ್ದು, ಅದರನ್ವಯ, ವೃತ್ತಿ ಬುನಾದಿ ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿದ ಅಭ್ಯರ್ಥಿಗಳಿಗೆ ಸದರಿ ನಿಯಮಗಳನ್ವಯ ಮುಂದಿನ ಸ್ಥಳ ನಿಯುಕ್ತಿಗೊಳಿಸಲಾಗುವುದು.

18. ಗಮನಿಸಬೇಕಾದ ಮುಖ್ಯ ಅಂಶಗಳು:

18.1. ವ್ಯಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿದ ಅಂಶಗಳು ಹಾಗೂ ಈ ಅಧಿಸೂಚನೆಯಲ್ಲಿನ ಅಂಶಗಳಲ್ಲಿ ಏನಾದರೂ ವ್ಯತ್ಯಾಸ ಕಂಡುಬಂದಲ್ಲಿ, ಸರ್ಕಾರದ ಅಧಿಸೂಚನೆ ಸಂಖ್ಯೆ: FEE 203 FEG 2015 ದಿನಾಂಕ: 06.08.2019ರ ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು, 2019ರಲ್ಲಿ ನಿಗದಿಪಡಿಸಿರುವ ಮಾನದಂಡಗಳು *[ಶಾರೀರಿಕ/ವೈದ್ಯಕೀಯ ಮಾನದಂಡಗಳು ಸೇರಿದಂತೆ]* ಅಂತಿಮವಾಗಿರುತ್ತವೆ.

18.2. ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿದ ಮಾತ್ರಕ್ಕೆ ಅಭ್ಯರ್ಥಿಯು ಆಯ್ಕೆಗೆ / ನೇಮಕಕ್ಕೆ ಅರ್ಹತೆ ಪಡೆಯುವುದಿಲ್ಲ.

18.3. ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮೊದಲು ದೇಹ ದಾರ್ಢ್ಯತೆಯ ಕುರಿತು ಸದರಿ ಹುದ್ದೆಗೆ ನಿಗದಿಪಡಿಸಿರುವ ಮಾನದಂಡವು ತಮಗೆ ಇರುವ ಕುರಿತು ಖಚಿತಪಡಿಸಿಕೊಂಡು ಅರ್ಜಿಯನ್ನು ಸಲ್ಲಿಸುವುದು.

18.4. ಅಂಗವೈಕಲ್ಯವನ್ನುಳ್ಳ ವ್ಯಕ್ತಿಗಳು (persons with disablities) ಅಂಗವಿಕಲತೆ ಸಮತಳ ಮೀಸಲಾತಿ ಕೋಟಾದಡಿ LC – Leprosy Cured, AAV – Acid Attack Victims and MI – Mental Illness ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿದ್ದು, **ಈ ಅಭ್ಯರ್ಥಿಗಳು ಯಾವುದೇ ವಿಧದ ಅಂಗವೈಕಲ್ಯತೆಯನ್ನು ಹೊಂದಿರಬಾರದು.**

18.5. ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಆನ್‌ಲೈನ್ ಅರ್ಜಿಯ ಒಂದು ಜೆರಾಕ್ಸ್ ಪ್ರತಿಯನ್ನು ಮತ್ತು ಶುಲ್ಕ ಪಾವತಿಸಿದ ರಶೀದಿಯನ್ನು ತಮ್ಮೊಂದಿಗೆ ತಪ್ಪದೇ ಇಟ್ಟುಕೊಳ್ಳುವುದು.

18.6. ಅಭ್ಯರ್ಥಿಯು ಅರ್ಜಿಯನ್ನು ಭರ್ತಿ ಮಾಡುವಾಗ ಅಸ್ಪಷ್ಟ/ಅಪೂರ್ಣ/ತಪ್ಪು ಅಥವಾ ಸುಳ್ಳು ಮಾಹಿತಿ ನೀಡಿದ್ದಲ್ಲಿ ಅಭ್ಯರ್ಥಿಗಳೇ ಅದಕ್ಕೆ ನೇರ ಮತ್ತು ಸಂಪೂರ್ಣ ಜವಾಬ್ದಾರರಾಗುತ್ತಾರೆ. ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ನೀಡಿರುವ ಮಾಹಿತಿ/ವಿವರಗಳನ್ನು ಯಾವುದೇ ಹಂತದಲ್ಲಿಯೂ ಬದಲಾವಣೆ/ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ. ಆದ ಪ್ರಯುಕ್ತ **ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವಾಗ ಈ ಅಧಿಸೂಚನೆಯಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಸರಿಯಾಗಿ ಓದಿ, ಅರ್ಥೈಸಿಕೊಂಡು, ನಂತರ ಅರ್ಜಿಯನ್ನು ಸಮರ್ಪಕವಾಗಿ ಭರ್ತಿ ಮಾಡತಕ್ಕದ್ದು.**

18.7. ಅರ್ಜಿ ಶುಲ್ಕವನ್ನು ಯಾವುದೇ ಕಾರಣಕ್ಕೂ ಮರುಪಾವತಿ ಮಾಡಲಾಗುವುದಿಲ್ಲ.

18.8. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 19 ಸೇನೆನಿ 2020 ದಿನಾಂಕ: 12.10.2020ರಲ್ಲಿ ಅಧಿಸೂಚಿತ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) (ತಿದ್ದುಪಡಿ) ನಿಯಮಗಳು, 2020ರ ನಿಯಮ 5(4) ರಂತೆ *"(4) ಒಬ್ಬ ಸರ್ಕಾರಿ ನೌಕರನು **ಅಥವಾ** ಬೇರೆ ಯಾವುದೇ ರಾಜ್ಯ ಸರ್ಕಾರದಲ್ಲಿ **ಅಥವಾ** ಕೇಂದ್ರ ಸರ್ಕಾರದಲ್ಲಿ **ಅಥವಾ** ಸಾರ್ವಜನಿಕ ವಲಯದ ಸಂಸ್ಥೆಯೊಂದರಲ್ಲಿ ಉದ್ಯೋಗದಲ್ಲಿರುವ ವ್ಯಕ್ತಿಯು, ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಯೊಂದಕ್ಕೆ ಆತನ ಆಯ್ಕೆ ಅಧಿಸೂಚನೆಗೊಂಡ ಕೂಡಲೇ ಅಂದರೆ ಅವನಿಗೆ ನೇಮಕಾತಿ ಆದೇಶ ಹೊರಡಿಸುವ ಮುನ್ನ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಪಡೆದು ಅವನನ್ನು ಅಂತಹ ಹುದ್ದೆಗೆ ನೇಮಕಾತಿ ಮಾಡಲು ಸಕ್ಷಮವಾದ ಪ್ರಾಧಿಕಾರಕ್ಕೆ ಅದನ್ನು ಹಾಜರುಪಡಿಸದ **ಅಥವಾ** ಅದನ್ನು 11ರ ಅನುಸಾರ ಪಡೆದಿದ್ದಾನೆ ಎಂದು ಪರಿಗಣಿತಗೊಳ್ಳದ ಹೊರತು ಆತನು ನೇಮಕಾತಿ ಹೊಂದಲು ಅರ್ಹನಾಗಿರತಕ್ಕದ್ದಲ್ಲ."*

18.9. ಯಾವುದೇ ಅಭ್ಯರ್ಥಿಯು ತನ್ನ ಆಯ್ಕೆಗೆ ಸಂಬಂಧಿಸಿದಂತೆ ಬಾಹ್ಯ ಒತ್ತಡ ತಂದಲ್ಲಿ/ ತರಲು ಪ್ರಯತ್ನಿಸಿದಲ್ಲಿ ಅಂತಹ ಅಭ್ಯರ್ಥಿಯ ಅಭ್ಯರ್ಥಿತ್ವವನ್ನು ರದ್ದುಪಡಿಸಿ, ಮುಂದಿನ ಆಯ್ಕೆ ಪ್ರಕ್ರಿಯೆಯಿಂದ ಅನರ್ಹಗೊಳಿಸಲಾಗುವುದು.

18.10. ಯಾವುದೇ ಕೇಂದ್ರ/ರಾಜ್ಯ ಸರ್ಕಾರಿ ಇಲಾಖೆ ಅಥವಾ ಸರ್ಕಾರಿ/ ಅರೆ ಸರ್ಕಾರಿ ಸಂಸ್ಥೆ/ಪ್ರಾಧಿಕಾರದ ಸೇವೆಯಿಂದ ವಜಾಗೊಂಡಿರುವ ನೌಕರರು ನೇಮಕಾತಿಗೆ ಅರ್ಹರಾಗುವುದಿಲ್ಲ.

18.11. ಕಾನೂನು ಬಾಹಿರವೆಂದು ಘೋಷಿಸಲಾದ ಸಂಸ್ಥೆ ಸಂಘದ ಸದಸ್ಯರಾಗಿದ್ದರೆ ಅಥವಾ ಇನ್ನಾವುದೇ ರೀತಿಯಲ್ಲಿ ಅಂತಹ ಸಂಸ್ಥೆ ಸಂಘದೊಂದಿಗೆ ನಿಕಟ ಸಂಪರ್ಕ ಹೊಂದಿದ್ದರೆ ಅಂತಹ ವ್ಯಕ್ತಿ ನೇಮಕಾತಿಗೆ ಅರ್ಹರಾಗುವುದಿಲ್ಲ.

18.12. ಅಭ್ಯರ್ಥಿಯು ಸಮಾಜಘಾತುಕ ಕೃತ್ಯಗಳಲ್ಲಿ ತೊಡಗಿ ಅಪರಾಧಿಯಾಗಿದ್ದರೆ ಅಂತಹ ವ್ಯಕ್ತಿಗಳು ನೇಮಕಾತಿಗೆ ಅರ್ಹರಾಗುವುದಿಲ್ಲ.

18.13. ಒಬ್ಬರಿಗಿಂತ ಹೆಚ್ಚು ಜೀವಂತ ಪತ್ನಿಯರನ್ನು/ಪತಿಯರನ್ನು ಹೊಂದಿದ ಪುರುಷ/ಮಹಿಳೆ ಅಭ್ಯರ್ಥಿಗಳು ಸರ್ಕಾರದ ಪೂರ್ವಾನುಮತಿ ಇಲ್ಲದೇ ನೇಮಕಾತಿಗೆ ಅರ್ಹರಾಗಿರುವುದಿಲ್ಲ.

18.14. ಯಾವುದೇ ಅಭ್ಯರ್ಥಿಯು ಕೇಂದ್ರ/ರಾಜ್ಯ ಸರ್ಕಾರ ಅಥವಾ ಸರ್ಕಾರಿ ಸಂಸ್ಥೆಗಳು ನಡೆಸುವ ಯಾವುದೇ ಪರೀಕ್ಷೆಗಳಿಗೆ ಅಥವಾ ಆಯ್ಕೆಗಳಿಗೆ ಹಾಜರಾಗಲು ತಾತ್ಕಾಲಿಕವಾಗಿ/ಖಾಯಂ ಆಗಿ ಬಹಿಷ್ಕರಿಸಲ್ಪಟ್ಟಿದ್ದರೆ (Debarred) ಅಂತಹ ಅಭ್ಯರ್ಥಿಯು ಅರಣ್ಯ ಇಲಾಖೆಯ ಯಾವುದೇ ನೇಮಕಾತಿಗೆ ಅರ್ಹರಾಗಿರುವುದಿಲ್ಲ.

18.15. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ ಎಸ್‌ಪಿಎಲ್ 04 ಪಿಇಟಿ 2005 ದಿನಾಂಕ 31.03.2006ರಂತೆ **ಅಂಶದಾಯಿ** ನಿವೃತ್ತಿ ಯೋಜನೆ (Contributory Pension Scheme) ವ್ಯಾಪ್ತಿಗೆ ಈ ನೇಮಕಾತಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಬದ್ಧರಾಗಿರುತ್ತಾರೆ.

18.16. ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಆಯ್ಕೆಗೆ ಪರಿಗಣಿಸಿರುವ ಅಂಶಗಳ ಬಗ್ಗೆ ವ್ಯತ್ಯಾಸ ಕಂಡು ಬಂದಲ್ಲಿ ಅಥವಾ ಆಕ್ಷೇಪಣೆ ಸಲ್ಲಿಕೆಯಾದಲ್ಲಿ, ನ್ಯಾಯಾಲಯ ಆದೇಶ, ಸರಕಾರದ ನಿರ್ದೇಶನ/ಸುತ್ತೋಲೆಗಳು ಬಂದಲ್ಲಿ, ಪ್ರಕಟಿಸಿರುವ ಆಯ್ಕೆಪಟ್ಟಿಯಲ್ಲಿ ಸೂಕ್ತ ಬದಲಾವಣೆ ಮಾಡಿ ಆಯ್ಕೆಪಟ್ಟಿ ಪರಿಷ್ಕರಿಸುವ ಸಂಪೂರ್ಣ ಅಧಿಕಾರವನ್ನು ಆಯ್ಕೆಪ್ರಾಧಿಕಾರವು ಹೊಂದಿರುತ್ತದೆ.

18.17. ಒಂದು ವೇಳೆ ಅಧಿಸೂಚನೆಯಲ್ಲಿ ನಮೂದಿಸಿರುವ ಹುದ್ದೆಗಳ ಸಂಖ್ಯೆಯಲ್ಲಿ ಕಡಿತ **ಅಥವಾ** ಹೆಚ್ಚುವರಿ ಆದಲ್ಲಿ ಮತ್ತು ಪ್ರವರ್ಗವಾರು ನೇರ ಮತ್ತು ಸಮತಳ ಮೀಸಲಾತಿ ವರ್ಗೀಕರಣದಲ್ಲಿ ಏನಾದರೂ ಬದಲಾವಣೆ ಮಾಡಬೇಕಾದ ಅವಶ್ಯಕತೆ ಕಂಡುಬಂದಲ್ಲಿ ಬದಲಾವಣೆ ಮಾಡಲಾಗುವುದು ಮತ್ತು ಬದಲಾದ ವಿವರಗಳ ಮಾಹಿತಿಯನ್ನು ಕರ್ನಾಟಕ ಅರಣ್ಯ ಇಲಾಖಾ ಜಾಲತಾಣ: **https://aranya.gov.in/** ನಲ್ಲಿ ಮುಖ ಪುಟದಲ್ಲಿ **"ನೇಮಕಾತಿ"** ಶೀರ್ಷಿಕೆ / *ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ https://cetonline.karnataka.gov.in/kea/ನ ಮೂಲಕ ಪ್ರಕಟಪಡಿಸಲಾಗುವುದು.*

18.18. ಅಭ್ಯರ್ಥಿಯು ಗಸ್ತು ಅರಣ್ಯ ಪಾಲಕ (ವೃಂದ ಮತ್ತು ನೇಮಕಾತಿ ನಿಯಮಗಳಂತೆ 'ಅರಣ್ಯ ರಕ್ಷಕ') ವೃಂದದ ಹುದ್ದೆಗೆ ಅರ್ಜಿ ಸಲ್ಲಿಸಿದ ತಕ್ಷಣ ತಾನು, ಸರ್ಕಾರದ ಎಲ್ಲಾ ಕಾಯ್ದೆ, ನಿಯಮ ಮತ್ತು ಅಧಿನಿಯಮಗಳಿಗೆ (Acts / Rules & Regulations) ಬದ್ಧನಾಗಿರುತ್ತಾನೆ ಎಂದು ಭಾವಿಸಲಾಗಿರುತ್ತದೆ. ಒಂದು ವೇಳೆ ತಾನು ಸದರಿ ಹುದ್ದೆಗೆ ಆಯ್ಕೆಯಾಗದ ಪಕ್ಷದಲ್ಲಿ ತದನಂತರ ಅದೇ ನಿಯಮಗಳನ್ನು ಪ್ರಶ್ನಿಸಲು ಅವಕಾಶವಿರುವುದಿಲ್ಲ.

18.19. ಅಭ್ಯರ್ಥಿಗಳು ನೇರ ನೇಮಕಾತಿ ಆಯ್ಕೆ ಪ್ರಕ್ರಿಯೆಯ ವಿಷಯದಲ್ಲಿ ಇಲಾಖೆಯೊಂದಿಗೆ ಯಾವುದೇ ಪತ್ರ ವ್ಯವಹಾರಕ್ಕೆ ಆಸ್ಪದವಿರುವುದಿಲ್ಲ.

18.20. ಆಯ್ಕೆ ಪ್ರಾಧಿಕಾರ/ ನೇಮಕಾತಿ ಪ್ರಾಧಿಕಾರವು ನೇರ ನೇಮಕಾತಿ ಪ್ರಕ್ರಿಯೆಯ ಸಂಬಂಧ ನಿಗದಿಪಡಿಸುವ ದಿನಾಂಕಗಳಂದು ಅಭ್ಯರ್ಥಿಯು ಗೈರುಹಾಜರಾದಲ್ಲಿ ಅಭ್ಯರ್ಥಿಯ ಅಭ್ಯರ್ಥಿತ್ವವು ಸ್ವಯಂ ಚಾಲಿತವಾಗಿ ರದ್ದಾಗುವುದು. ಈ ಕುರಿತು ಯಾವುದೇ ಪತ್ರ ವ್ಯವಹಾರಗಳಿಗೆ ಅವಕಾಶವಿರುವುದಿಲ್ಲ.

18.21. ಅಭ್ಯರ್ಥಿಯು ಆನ್‌ಲೈನ್ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನೀಡಿದ ಮೊಬೈಲ್ ಸಂಖ್ಯೆ ಮತ್ತು ಇ-ಮೇಲ್ ಐಡಿಯನ್ನು ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಚಾಲನೆಯಲ್ಲಿರುವಂತೆ ನಿಗಾವಹಿಸತಕ್ಕದ್ದು.

18.22. ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿಯನ್ನು ಭರ್ತಿ ಮಾಡುವ ಮೊದಲು ವೆಬ್‌ಸೈಟ್‌ನಲ್ಲಿ ನೀಡಿರುವ ವಿವರವಾದ ಪ್ರಕಟಣೆಯನ್ನು / ಸೂಚನೆಗಳನ್ನು / ವಿಧಾನವನ್ನು ತಿಳಿದುಕೊಳ್ಳುವುದು ಹಾಗೂ ಅರ್ಜಿಯಲ್ಲಿ ಘೋಷಿಸಿರುವ ಮಾಹಿತಿಗಳು ಅಂತಿಮವಾಗಿದ್ದು, ಹೆಚ್ಚಿನ ಮಾಹಿತಿ / ದಾಖಲೆಗಳ ಸಲ್ಲಿಕೆಗೆ ಅವಕಾಶವಿರುವುದಿಲ್ಲ.

18.23. ಪರೀಕ್ಷಾ ಕೇಂದ್ರಗಳ ವಿವರಗಳು ಆನ್‌ಲೈನ್ ಅರ್ಜಿಯಲ್ಲಿ ಅಭ್ಯರ್ಥಿಯ ಆಯ್ಕೆಗೆ ಲಭ್ಯವಿರುತ್ತದೆ. ಅಭ್ಯರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಹಾಗೂ ಆಡಳಿತಾತ್ಮಕ ಕಾರಣಗಳಿಂದಾಗಿ ಪರೀಕ್ಷಾ ಕೇಂದ್ರವನ್ನು ರದ್ದುಗೊಳಿಸುವ ಅಧಿಕಾರ ಆಯ್ಕೆ ಪ್ರಾಧಿಕಾರವು ಹೊಂದಿರುತ್ತದೆ. ಇಂತಹ ಪ್ರಕರಣಗಳಲ್ಲಿ ಬದಲಿ ಪರೀಕ್ಷಾ ಕೇಂದ್ರಗಳ ವಿವರಗಳನ್ನು ಅರಣ್ಯ ಇಲಾಖೆಯ ಅಧಿಕೃತ ಜಾಲತಾಣದ ಮೂಲಕ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗುವುದು.

18.24. ಸೇವೆಯಲ್ಲಿರುವ ಅಭ್ಯರ್ಥಿಗಳು ಆಯ್ಕೆಯಾದಲ್ಲಿ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಪಡೆದು ನೇಮಕಾತಿ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

18.25. ಅಭ್ಯರ್ಥಿಯು ಸಲ್ಲಿಸಿರುವ ಶೈಕ್ಷಣಿಕ ವಿದ್ಯಾರ್ಹತೆ ಪ್ರಮಾಣ ಪತ್ರ / ಇನ್ನಿತರೆ ಮೀಸಲಾತಿ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದಂತೆ, ಯಾವುದೇ ಗೊಂದಲಗಳು ಇದ್ದಲ್ಲಿ ಸಂಬಂಧಪಟ್ಟ ಪ್ರಾಧಿಕಾರ / ಇಲಾಖೆ ಗೊಂದಲ ನಿವಾರಣೆ ಮಾಡುವವರೆಗೆ ಅವರ ಆಯ್ಕೆಯನ್ನು ಅಂತಿಮಗೊಳಿಸಲಾಗುವುದಿಲ್ಲ.

18.26. ಲಿಖಿತ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಕೈಗೊಂಡು ಲಿಖಿತ ಪರೀಕ್ಷೆಯ ಅಂತಿಮ ಅಂಕಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಲಿದ್ದು, ತದನಂತರದಲ್ಲಿ ಅರಣ್ಯ ಇಲಾಖೆಯು ಮುಂದಿನ ನೇರ ನೇಮಕಾತಿ ಪ್ರಕ್ರಿಯೆಗಳನ್ನು ನಡೆಸಲಾಗುವುದು.

18.27. ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಅರಣ್ಯ ಸಹಾಯವಾಣಿ – 1926ನ್ನು ಸಂಪರ್ಕಿಸುವುದು ಮತ್ತು ಮಾಹಿತಿ ಕೇಂದ್ರ- 080-23460460. (10.00AM to 6.00PM) (ಲಿಖಿತ ಪರೀಕ್ಷೆ ಹಾಗೂ ಅಂಕಪಟ್ಟಿಯ ಕುರಿತು ಮಾತ್ರ ಪ್ರಾಧಿಕಾರಕ್ಕೆ ಕರೆ ಮಾಡಬಹುದಾಗಿರುತ್ತದೆ.)

18.28. ಅಭ್ಯರ್ಥಿಯ ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಯಾವುದೇ ಸ್ಪಷ್ಟೀಕರಣಕ್ಕೆ ಆಯ್ಕೆ ಪ್ರಾಧಿಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ. ಎಲ್ಲಾ ಕಾನೂನು ವಿವಾದಗಳು ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

19. ಅರಣ್ಯ ಇಲಾಖೆ/ ಕರ್ನಾಟಕ ಪರೀಕ್ಷಾ ಪ್ರಾಧಿಕಾರದೊಡನೆ ಪತ್ರ ವ್ಯವಹಾರ:

ಪ್ರಾಧಿಕಾರವು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸುವುದಿಲ್ಲ. ಆದುದರಿಂದ, ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡುವಾಗ ಜಾಗರೂಕತೆಯಿಂದ ಭರ್ತಿ ಮಾಡತಕ್ಕದ್ದು. ಅಭ್ಯರ್ಥಿಗಳು ಪ್ರಾಧಿಕಾರದೊಡನೆ ಸಂಪರ್ಕಿಸಲೇಬೇಕಾದ ಸಂದರ್ಭದಲ್ಲಿ ತಮ್ಮ ಮನವಿಯು ಈ ಕೆಳಕಂಡ ಮಾಹಿತಿಗಳನ್ನು ಒಳಗೊಂಡಿರಬೇಕು.

(i) ಅರ್ಜಿ ಸಂಖ್ಯೆ ಮತ್ತು ಹುದ್ದೆಯ / ವಿಷಯದ ಹೆಸರು
(ii) ಅಭ್ಯರ್ಥಿಯ ಪೂರ್ಣ ಹೆಸರು (ಬಿಡಿ ಅಕ್ಷರಗಳಲ್ಲಿ)
(iii) ಅರ್ಜಿಯಲ್ಲಿ ನಮೂದಿಸಿರುವ ಅಂಚೆ ವಿಳಾಸ

19.1. ಪ್ರಾಧಿಕಾರದ **ಅಧಿಕೃತ 'X' ಖಾತೆ @KEA_KARNATAKA** ದಲ್ಲಿ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ನೇಮಕಾತಿ ಸಂಬಂಧದ ಎಲ್ಲಾ ಮಾಹಿತಿಗಳನ್ನು ಪಡೆಯಬಹುದಾಗಿರುತ್ತದೆ.

19.2. ಅರ್ಜಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳಬೇಕು:

ಸಾ.ಅ.	ಸಾಮಾನ್ಯ ಅರ್ಹತೆ	GM	General Merit
ಪ.ಜಾ (ಪ್ರ-ಎ) (ಪ್ರ-ಬಿ) (ಪ್ರ-ಸಿ)	ಪರಿಶಿಷ್ಟ ಜಾತಿ (ಪ್ರವರ್ಗ-ಎ) (ಪ್ರವರ್ಗ-ಬಿ) (ಪ್ರವರ್ಗ-ಸಿ)	SC (Cat-A) (Cat-B) (Cat-C)	Scheduled Caste (Category-A) (Category-B) (Catergory-C)
ಪ.ಪಂ	ಪರಿಶಿಷ್ಟ ಪಂಗಡ	ST	Scheduled Tribe
ಪ್ರ-1	ಪ್ರವರ್ಗ-1	Cat-1	Category-1
2ಎ	ಪ್ರವರ್ಗ-2ಎ	2A	Category-2
2ಬಿ	ಪ್ರವರ್ಗ-2ಬಿ	2B	Category-2B
3ಎ	ಪ್ರವರ್ಗ-3ಎ	3A	Category-3A

3ಬಿ	ಪ್ರವರ್ಗ-3ಬಿ	3B	Category-3B
ಮಾ.ಸೈ	ಮಾಜಿ ಸೈನಿಕ	XMP	Ex-Service Men (Ex-Military person)
ಗ್ರಾಮೀಣ	ಗ್ರಾಮೀಣ ಅಭ್ಯರ್ಥಿ	Rural	Rural Candidate
ಕ.ಮಾ.ಅ	ಕನ್ನಡ ಮಾಧ್ಯಮ ಅಭ್ಯರ್ಥಿ	KMS	Kannada Medium Candidate
ಯೋ.ಅ	ಯೋಜನಾ ನಿರಾಶ್ರಿತ ಅಭ್ಯರ್ಥಿ	PDP	Project Displaced Person
ತೃ.ಲಿ.	ತೃತೀಯ ಲಿಂಗಿ	TG	Transgender
ಕೆ.ಕೆ	ಕಲ್ಯಾಣ ಕರ್ನಾಟಕ	KK	Kalyana Karnataka
ವಿ.ಚೇ	ವಿಶೇಷ ಚೇತನ (ಅಂಗವಿಕಲ)	PWD	Person with Disabilities
ಕ್ರೀ.ಸಾ	ಕ್ರೀಡಾ ಸಾಧಕ	SA	Sports Achievers

ಗಮನಿಸಿ:

1. ಕೇವಲ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ್ದಲ್ಲಿ, ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾದಲ್ಲಿ ಮತ್ತು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಮಾತ್ರಕ್ಕೆ ಅಭ್ಯರ್ಥಿಗಳಿಗೆ ಈ ಮೇಲಿನ ವಿವಿಧ ಹುದ್ದೆಗಳ ನೇಮಕಾತಿಯಲ್ಲಿ ಯಾವುದೇ ಹಕ್ಕನ್ನು ನೀಡುವುದಿಲ್ಲ, ನೇಮಕಾತಿಯು ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸುವ ಅರ್ಹತಾ ಮಾನದಂಡಗಳಿಗೆ ಒಳಪಟ್ಟಿರುತ್ತದೆ.
2. ಮೇಲಿನ ಯಾವುದೇ ನಿಯಮಗಳು / ಕಾರ್ಯ ವಿಧಾನಗಳಿಗೆ ಸಂಬಂಧಿಸಿದಂತೆ ವ್ಯತ್ಯಾಸ ಅಥವಾ ಅಸ್ಪಷ್ಟತೆ ಕಂಡು ಬಂದಲ್ಲಿ, ಸರ್ಕಾರದ ಅಧಿಸೂಚನೆ ಸಂಖ್ಯೆ: FEE 203 FEG 2015 ದಿನಾಂಕ: 06.08.2019ರ ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು, 2019ರನ್ವಯ ಕರ್ನಾಟಕ ನಾಗರಿಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977 ಹಾಗೂ ಕಾಲಕಾಲಕ್ಕೆ ಆಗಿರುವ ಅದರ ತಿದ್ದುಪಡಿ ನಿಯಮಗಳು, ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 149 ಎಸ್‌ಆರ್‌ಆರ್ 2020, ದಿನಾಂಕ: 25.09.2020 ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಡಬ್ಲುಸಿಡಿ 111 ಪಿಹೆಚ್‌ಪಿ 2022 ದಿನಾಂಕ 19.08.2023, ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) ಸಾಮಾನ್ಯ) ನಿಯಮಗಳು 2021 ಹಾಗೂ ಕಾಲಕಾಲಕ್ಕೆ ಆಗಿರುವ ಅದರ ತಿದ್ದುಪಡಿ ನಿಯಮಗಳು, ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2026, ದಿನಾಂಕ:13.05.2026 ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 05 ಸೆಹಿಮ 2026, ದಿನಾಂಕ:13.10.2026 ಹಾಗೂ ನೇರ ನೇಮಕಾತಿ ಅಧಿಸೂಚನೆ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಆಗಿರುವ ಇನ್ನಿತರ ತಿದ್ದುಪಡಿಗಳು ಅನ್ವಯವಾಗುತ್ತವೆ.

20. ದುರ್ನಡತೆ:

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು **ಅಥವಾ** ಖೋಟಾ ದಸ್ತಾವೇಜು **ಅಥವಾ** ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು **ಅಥವಾ** ತಪ್ಪು **ಅಥವಾ** ಸುಳ್ಳು ಹೇಳಿಕೆ ನೀಡಿರುವನೆಂದು **ಅಥವಾ** ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು **ಅಥವಾ** ನೇಮಕಾತಿ ಉದ್ದೇಶಗಳಿಗಾಗಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು **ಅಥವಾ** ಅನುಸರಿಸಲು ಪ್ರಯತ್ನಿಸಿರುವನೆಂದು **ಅಥವಾ** ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ **ಮತ್ತು** ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಕಂಡುಬಂದಲ್ಲಿ ಅವನು/ಅವಳು ಸ್ವತಃ ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಒಂದು ವೇಳೆ ನೇಮಕಗೊಂಡಲ್ಲಿ ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ ಹುದ್ದೆಯ ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು ಹಾಗೂ ಕರ್ನಾಟಕ ನಾಗರಿಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ಉಪ ನಿಯಮ 20ರಂತೆ ಅಪರಾಧಿ ವ್ಯವಹರಣೆಗೆ ಒಳಪಡುವರು. ಅಲ್ಲದೆ, ಆಯ್ಕೆ ಪ್ರಾಧಿಕಾರ ಅಥವಾ ಆಯ್ಕೆ ಪ್ರಾಧಿಕಾರದಿಂದ ಅಧಿಕೃತಗೊಳಿಸಿದ ಅಧಿಕಾರಿಯ ಹಂತದಲ್ಲಿ ಅಂತಹ ಅಭ್ಯರ್ಥಿಯನ್ನು ಕರ್ನಾಟಕ ಅರಣ್ಯ ಇಲಾಖೆಯಲ್ಲಿನ ನೇಮಕಾತಿಗಳಿಗೆ 10 ವರ್ಷಗಳ ಅವಧಿವರೆಗೂ ಅನರ್ಹ (Debar) ಮಾಡಲಾಗುವುದು.

ಸೂಚನೆ: ಈ ಅಧಿಸೂಚನೆಯಲ್ಲಿ ತಿಳಿಸಿರುವ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣಕ್ಕೆ ಸಂಬಂಧಿಸಿದಂತೆ, ಲಿಖಿತ ಪರೀಕ್ಷೆ ದಿನಾಂಕಕ್ಕೆ ಮೊದಲು ಬದಲಾವಣೆ ಇದ್ದಲ್ಲಿ ಅಷ್ಟಕ್ಕೆ ಸೀಮಿತವಾಗಿ ಮಾತ್ರ ತಿದ್ದುಪಡಿ ಅಧಿಸೂಚನೆ ಹೊರಡಿಸಲಾಗುವುದು. ಮುಂದುವರೆದು, ಯಾವುದೇ ಸೂಚನೆ / ಬದಲಾವಣೆಗಳು ಇದ್ದಲ್ಲಿ ಅರ್ಜಿ ಸಲ್ಲಿಸುವ ಕೊನೆಯ ಒಂದು ವಾರದೊಳಗೆ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗುವುದು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯಪಡೆ ಮುಖ್ಯಸ್ಥರು), ಕರ್ನಾಟಕ
ಹಾಗೂ ಆಯ್ಕೆ ಪ್ರಾಧಿಕಾರ